
ಕೊಡಗು ಸಂಗಾತಿ

ಸಂಪಾದಕಿ : ಪಟ್ಟೆಡ ಶೀಲಾಮಣಿ

ಕನ್ನಡ ಮತ್ತು ಗೌಡ ಕನ್ನಡದ ಏಕೈಕ ಪಾಕ್ಷಿಕ ಪತ್ರಿಕೆ

K.R.N.N. 240 ಸಂಪುಟ : 2 ಸಂಚಿಕೆ : 11 ಜೂನ್ 1 ರಿಂದ 15-1998 ಪುಟಗಳು : 24 ರೂ. 5



ಚಿತ್ರ : ತಡಿಯಪ್ಪನ ಭವ್ಯ ಕುಮಾರಜಯ

ವಿನಾಶದ ಅಂಚಿನಲ್ಲಿರುವ ಪ್ರಾಣಿ ವರ್ಗಗಳಲ್ಲಿ ಇದು ಒಂದು......?

ಸಂಗಾತಿ ಓದುಗ ಮಹಾಶಯರಲ್ಲಿ ವಿನಂತಿ

"ಕೊಡಗು ಸಂಗಾತಿ" ಪತ್ರಿಕೆಯ ಹೆಚ್ಚಿನ ಸದಸ್ಯರ ಚಂದಾ ಶುಲ್ಕವು ದಿನಾಂಕ **31–3–1998**ಕ್ಕೆ ಮುಗಿದಿರುತ್ತದೆ. ವಾಯಿದೆ ಮುಗಿದ ಸರ್ವ ಸದಸ್ಯರಿಗೂ ಈಗಾಗಲೇ ಅಂಚೆ ಮೂಲಕ ತಿಳುವಳಿಕೆಯ ಜ್ಞಾಪನಾ ಪತ್ರವನ್ನು ಸಹ ಕಳುಹಿಸಲಾಗಿದೆ. ಎರಡು ಬಾರಿ ಪತ್ರಿಕೆಯೊಳಗೆ ಸಹ ಪತ್ರವನ್ನು ಹಾಕಿದ್ದರೂ ಈ ತನಕ ನಿರೀಕ್ಷಿಸಿದ ಮಟ್ಟದಲ್ಲಿ ಎಂ.ಓ./ಡಿ.ಡಿ./ಚೆಕ್ ಮೂಲಕ ಹಣ ಬಂದಿರುವುದಿಲ್ಲ. ಆದ್ದರಿಂದ ಪ್ರಿಯ ಚಂದಾದಾರರು ಶೀಘ್ರವಾಗಿ ಸದಸ್ಯತ್ವವನ್ನು ನವೀಕರಿಸಿಕೊಳ್ಳುವಂತೆ ಪ್ರಿಯ ಓದುಗರಲ್ಲಿ ಸವಿನಯ ಪ್ರಾರ್ಥನೆ.

– ಸಂಪಾದಕಿ ಮತ್ತು ಪತ್ರಿಕಾ ಬಳಗ.

ಕೊಡಗು ಸಂಗಾತಿ

ಸಂಪಾದಕಿ, ಪ್ರಕಾಶಕಿ :

ಪಟ್ಟಡ ಪಿ. ಶೀಲಾಮಣಿ

ಗೌರವ ಸಂಪಾದಕ :

ಪಟ್ಟಡ ಎಂ. ಪ್ರಭಾಕರ

ಮುದ್ರಕರು :

ಮಣ್ಣೂಂಡ್ರ ಕೆ. ತಮ್ಮಯ್ಯ

ಆಶೀರ್ವಾದ್ ಪ್ರಿಂಟರ್ಸ್,

180/ಎ, 6ನೇ ಮುಖ್ಯರಸ್ತೆ,

ವಿನಾಯಕನಗರ, ಮೈಸೂರು-12

ಚಂದಾ ಕಳುಹಿಸುವ ಮತ್ತು

ಜಾಹೀರಾತು ಪ್ರಸಾರ ಕಛೇರಿ :

ಕೊಡಗು ಸಂಗಾತಿ

ನಂ. 35, "ಸವಿತಾ ನಿಲಯ"

1ನೇ ಕ್ರಾಸ್, 4ನೇ ಬ್ಲಾಕ್,

ಡಿವಿಜನಲ್ ಟೆಲಿಕಾಂ ಕಛೇರಿ ಹತ್ತಿರ,

ಜಯಲಕ್ಷ್ಮಿಪುರಂ, ಮೈಸೂರು-12.

ಫೋನ್ : **516771**

ಮಡಿಕೇರಿಯ ನಮ್ಮ ವಿಳಾಸ

ಕೊಡಗು ಸಂಗಾತಿ

C/o ನಂಗಾರ್ ಆಡಿಯೋ ವೀಡಿಯೊ

ಹೊಳ್ಳ ಕಾಂಪ್ಲೆಕ್ಸ್, ಮಂಗಳೂರು ರಸ್ತೆ,

ಚಿಕ್ಕಪೇಟೆ, ಮಡಿಕೇರಿ-571 201

ಒಳನೋಟ

ಪುಟಗಳು

ಅರೆ ಭಾಷೆಕ ವಿಭಾಗ

ಚಂದಾ ವಿವರ

ಬಿಡಿ ಪ್ರತಿ	:	**5 ರೂ.**
ಅರ್ಧ ವಾರ್ಷಿಕ	:	**60 ರೂ.**
ವಾರ್ಷಿಕ ಚಂದಾ	:	**120 ರೂ.**

ಸಂಪಾದಕೀಯ :

ಸಮಾಜದ ಪಿಡುಗುಗಳು

ಕೊಡಗು ಗೌಡ ಸಮಾಜದ ವಿವಾಹ ಪದ್ಧತಿ ಖರ್ಚು ಮಾಡುವ ರೀತಿ ಬೇರೆ ಪ್ರದೇಶಗಳಿಗೆ ಹೋಲಿಸಿದರೆ ನಿಜವಾಗಿಯೂ ಶ್ಲಾಘನೀಯವಾದ ಸಂಗತಿ ಎಂದರೆ ತಪ್ಪಾಗದು.

ಕೊಡಗಿನಲ್ಲಿರುವ ಎಲ್ಲಾ ಜಾತಿಯ ವಿವಾಹದ ರೀತಿಯನ್ನು ಬೇರೆ ಕಡೆಗಳಿಗೆ ಹೋಲಿಸಿದರೆ ತುಂಬಾ ಸೌಹಾರ್ದ ರೀತಿಯಲ್ಲಿ ನಡೆಯುತ್ತಾ ಬರುತ್ತಿದೆ. ಕೊಡಗಿನಲ್ಲಿ ವರದಕ್ಷಿಣೆ ಪಿಡುಗು ಅಷ್ಟೇನಿಲ್ಲವೆನ್ನಬಹುದು. ಅಲ್ಲದೆ ವರನ ಕಡೆಯವರು ಕೊಡಗಿನಿಂದ ಹೊರಗೆ ಇರುವ ರೀತಿಯಲ್ಲಿ ವರನ ಕಡೆಯವರು ತಮ್ಮ ವರನಿಗೆ ಇಂತಹದ್ದೇ ಕಲ್ಯಾಣ ಮಂಟಪದಲ್ಲಿ ಮದುವೆ ಮಾಡಿಸಬೇಕು, ವರನಿಗೆ ಸೈಟು, ಮೋಟಾರ್ ಬೈಕು, ತೆಗೆಸಿಕೊಟ್ಟು ಇಂತಿಷ್ಟೇ ಚಿನ್ನ ಕೊಡಬೇಕು ಎನ್ನುವ ಬೇಡಿಕೆಗಳಿಲ್ಲ. ಮದುವೆ ಮಾಡುವಾಗ ಹೆಣ್ಣಿನ ಕಡೆಯವರೂ, ಗಂಡಿನ ಕಡೆಯವರೂ ಒಂದೇ ಸ್ಥಳದಲ್ಲಿ ಮದುವೆ ಮಾಡುವುದಾದರೆ ಕಲ್ಯಾಣ ಮಂಟಪದಲ್ಲಾಗುವ ಖರ್ಚನ್ನು ಎರಡೂ ಕಡೆಯವರು ಸಮ ಭಾಗವಾಗಿ ಹಂಚಿಕೊಳ್ಳುತ್ತಾರೆ. ವಧುವಿಗೆ ಗಂಡಿನ ಕಡೆಯಿಂದ ಇಂತಿಂಥ ಒಡವೆಗಳನ್ನು ಮಾಡಿಸಬೇಕೆಂಬ ಮಾತುಕತೆಯ ರೀತಿ ವರನ ಕಡೆಯವರೇ ಚಿನ್ನಾಭರಣವನ್ನು ಮಾಡಿಸಿ ವಧುವಿಗೆ ತೊಡಿಸುತ್ತಾರೆ.

ಹಿಂದಿನ ಕಾಲದಲ್ಲಿ ಒಂದು ಮದುವೆ ಎಂದರೆ ಇನ್ನೂರು ಮುನ್ನೂರು ಜನ ಸೇರಿದರೆ ಮದುವೆ ಆಗುತಿತ್ತು. ಈಗ ಬರು ಬರುತ್ತಾ ಸಾವಿರಾರು ಜನರು ಸೇರುವಂತೆ ಆಹ್ವಾನ ಪತ್ರಿಕೆ ಕೊಡುತ್ತಾರೆ. ಹಾಗಾಗಿ ಖರ್ಚು ಹೆಚ್ಚಾಗುತ್ತಿದೆ. ಹಿಂದೆ ಕೊಡಗಿನಲ್ಲಿ ವರದಕ್ಷಿಣೆ ಇಲ್ಲದೆ ಇದ್ದದ್ದು ಈಗ ವಿದ್ಯಾವಂತ ಯುವಕರಿಗೆ ಉದಾ: ಇಂಜಿನಿಯರ್, ಡಾಕ್ಟ್ರು, ಲೆಕ್ಚರರ್, ಸಬ್ ಇನ್ಸ್‌ಪೆಕ್ಟರುಗಳು ಲಕ್ಷದ ಮಟ್ಟದಲ್ಲಿ ಕೇಳುವವರಿದ್ದಾರೆಂದು ಸಂಗಾತಿಗೆ ತಿಳಿದು ಬಂದಿದೆ.

ವಿದ್ಯಾವಂತರೇ ಈ ರೀತಿಯ ವರದಕ್ಷಿಣೆ ಪಿಡುಗಿಗೆ ಸಿಕ್ಕಿ ನರಳುತ್ತಿರುವುದು ಶೋಚನೀಯ ಸಂಗತಿಯಾಗಿದೆ ಈ ರೀತಿ ಇವರು ಗಳಿಸಿದ ಡಿಗ್ರಿ ಹಾಗೂ ಪದವಿ ಹೆಣ್ಣು ಹೆತ್ತವರ ರಕ್ತವನ್ನು ಹೀರುವ ರೀತಿಯಾಗಿದೆ. ಕೊಡಗಿನಲ್ಲಿಯೇ ಹುಟ್ಟಿ, ಕೊಡಗಿನ ಸಂಪ್ರದಾಯವನ್ನು ಈ ರೀತಿ ಮುರಿದವರಿಗೆ ಸಮಾಜ ಛೀಮಾರಿ ಹಾಕಬೇಕು. ಇಂತಹವರನ್ನು ಸಾಮೂಹಿಕವಾಗಿ ಬಹಿಷ್ಕರಿಸಬೇಕು. ಸಮಾಜಗಳು, ಯುವಕ ಯುವತಿಯರು ಇಂತಹ ವಿಷಯದಲ್ಲಿ ಸರಿಯಾದ ಪಾಠ ಕಲಿಸಬೇಕು. ಸಮಾಜದಲ್ಲಿ ಜಿಗಣೆಗಳಂತೆ ವಧುವಿನ ಪೋಷಕರಿಂದ ರಕ್ತ ಹೀರುವವರನ್ನು ಸಮಾಜ ಎಚ್ಚೆತ್ತು ದೂರವಿಡಬೇಕು. ಹೊರಗಿನ ಈ ಪಿಡುಗು ಕೊಡಗಿನವರಿಗೂ ಅಂಟದಿಂತೆ ಜಾಗರೂಕರಾಗಬೇಕು.

ಇದೇ ರೀತಿ ಈಗೀಗ ಮದುವೆಗಳಲ್ಲಿ "ಮಿನಿಬಾರ್" ಗಳನ್ನು ತೆರೆದು ಕುಡಿತಕ್ಕೆ ಎಡೆಮಾಡುವುದು ಸಹ ಸಮಾಜದ ಒಂದು ಅಂಟು ಖಾಯಿಲೆಯಾಗಿ ಕಂಡುಬರುತ್ತಿದೆ. ಇದರಲ್ಲೂ ಸ್ಪರ್ಧೆ ಪ್ರಾರಂಭವಾಗಿದೆ. ಒಬ್ಬರು 50 ಸೀಸೆ ಸೇರಿಸಿದರೆ ಅವರಿಗಿಂತ ನಾನೇನು ಕಡಿಮೆ ಎಂಬ ಒಣ ಜಂಭದಿಂದ 100 ಸೀಸೆ ಖರ್ಚಾಗುವಷ್ಟು ಮದ್ಯವನ್ನು ಹಂಚುವ ಪರಿಪಾಠ ಶ್ರೀಮಂತ ವರ್ಗದಲ್ಲಿ ಪ್ರಾರಂಭವಾಗಿದೆ ಇದೆಲ್ಲಾ ಸುಸಂಸ್ಕೃತ ಸಮಾಜದ ಚಿನ್ಹೆಯೇ? ಭಾರತ ಸ್ವಾತಂತ್ರ್ಯ ಸಿಗುವುದಕ್ಕೆ ಮೊದಲು ಬ್ರಿಟಿಷರ ಗುಲಾಮರಾಗಿದ್ದೇವು. ಆದರೆ ಬ್ರಿಟಿಷರು ಹೋಗಿ 50 ವರ್ಷದ ಮೇಲೂ ಪಾಶ್ಚಾತ್ಯ ರೀತಿಯ ಅನುಕರಣೀಯ ಮದ್ಯಪಾನ ಈಗ ಕೊಡಗಿನಲ್ಲಿ ಪ್ರಾರಂಭವಾಗಿರುವುದು ಸಮಾಜದ ಪ್ರಗತಿಗೆ ಅಲ್ಲ, ಬದಲಾಗಿ ನಮ್ಮ ಸಮಾಜದ ಅವನತಿಗೆಂದೇ ಹೇಳಬಹುದು. ಇನ್ನೊಂದು ಪ್ರಬಲ ಪಂಗಡದವರು ಮಾಡುವುದೆಂದು ಗೌಡರು ಅನುಕರಣೆ ಮಾಡುತ್ತಿದ್ದಾರೆ. ಹಣವಂತರು ಮಾಡುತ್ತಾರೆಂದು ಬಡವರು ಸಾಲ ಮಾಡಿಯಾದರೂ ಈ ರೀತಿಯ ದುಂದು ವೆಚ್ಚದ ಸಮಾರಂಭಗಳನ್ನು ನಡೆಸುವವರಿಗೆ ಬುದ್ಧಿ ಹೇಳುವವರು ಯಾರೂ ಇಲ್ಲವೆ ಎಂದು ಸಂಗಾತಿಯ ವ್ಯಥೆ. ಸಾಧಾರಣ 60 ವರ್ಷಗಳ ಹಿಂದೆ ನಮ್ಮ ಹಿರಿಯರು ಕಾಡು ಬೇಟೆ, ಕುಡಿತ, ಕೋಳಿ ಕಟ್ಟ, ಇಸ್ಪೇಟು ಮುಂತಾದ ದುಶ್ಚಟಗಳಿಂದ ತಮ್ಮಲ್ಲಿದ್ದ ಆಸ್ತಿ-ಪಾಸ್ತಿಗಳನ್ನು ಕಳೆದುಕೊಂಡು ಅನಕ್ಷರಸ್ತರಾಗಿ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸದೆ ನಮ್ಮ ಜನಾಂಗ ಹಿಂದುಳಿಯುವುದಕ್ಕೆ ಕಾರಣರಾದಂತೆ ಮೇಲೆ ಹೇಳಿದ ಪಿಡುಗುಗಳನ್ನು ತೊಲಗಿಸದೆ ಇದ್ದ ಪಕ್ಷದಲ್ಲಿ ನಮ್ಮ ಪರಿಸ್ಥಿತಿ ಮರುಕಳಿಸಬಹುದೆಂಬ ಸಂಶಯ ಸಂಗಾತಿಗೆ ಬಂದಿದೆ. ಇದನ್ನು ಸರಿಪಡಿಸಲು ಗ್ರಾಮ ಗ್ರಾಮಗಳಲ್ಲಿ ಸಮಾಜಗಳನ್ನೂ, ಮಹಿಳಾ ಸಂಸ್ಥೆಗಳನ್ನೂ ಹಾಗೂ ಯುವಕ ಸಂಘಗಳನ್ನೂ ಸ್ಥಾಪಿಸಿ, ಈ ಪರಿಯನ್ನು ನಿವಾರಿಸಲು ಕಂಕಣ ಬದ್ಧರಾಗೋಣವೆ? ಎಂದು ಸಂಗಾತಿ ಸಮಾಜದವರನ್ನು ಕೇಳಿಕೊಳ್ಳುತ್ತಿದೆ.

ಕುರುಂಜಿ ವೆಂಕಟರಮಣಗೌಡರಿಗೆ ಆರ್ಟ್ ಆಫ್ ಇಂಡಿಯಾ ಗೋಲ್ಡ್-1998 ಪ್ರಶಸ್ತಿ

ವಿದ್ಯಾ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸುವ ವ್ಯಕ್ತಿಗಳಿಗೆ ನವದೆಹಲಿಯ ಎನ್.ಆರ್.ಐ. ಇನ್ಸ್‌ಟಿಟ್ಯೂಟ್ ಕೊಡ ಮಾಡುವ ಆರ್ಟ್ ಆಫ್ ಇಂಡಿಯಾ ಗೋಲ್ಡ್-98ರ ಪ್ರಶಸ್ತಿಗಾಗಿ ಈ ಬಾರಿ ಸುಳ್ಯದ ಕುರುಂಜಿ ವೆಂಕಟರಮಣ ಗೌಡ ಅವರನ್ನು ಆಯ್ಕೆ ಮಾಡಲಾಗಿದೆ.

ಶ್ರೀಯುತರ ಅಂತರಾಷ್ಟ್ರೀಯ ಮಟ್ಟದ ಉನ್ನತ ಸೇವೆಗೆ ಈ ಪ್ರಶಸ್ತಿ ಸಂದಿದೆ. ಮುಂದಿನ ತಿಂಗಳು ಜುಲೈ 2 ರಂದು ಲಂಡನ್‌ನಲ್ಲಿ ನಡೆಯಲಿರುವ ಸಮಾರಂಭ ದಲ್ಲಿ ಪ್ರಶಸ್ತಿಯನ್ನು ಸ್ವೀಕರಿಸಲಿದ್ದಾರೆ. ಈ ಸಮಾರಂಭದಲ್ಲಿ ಭಾರತದ ಉಪ ಆರ್ಥಿಕ ಸಚಿವ, ಭಾರತದ ರಾಯಭಾರಿ ಹಾಗೂ ಇನ್ನಿತರ ಗಣ್ಯರು ಪಾಲ್ಗೊಳ್ಳಲಿದ್ದಾರೆ.



ಕುರುಂಜಿ ವೆಂಕಟರಮಣಗೌಡರು

ಈ ಮೊದಲು ವೆಂಕಟರಮಣ ಗೌಡರು ಸಲ್ಲಿಸಿರುವ ಅನರ್ಘ್ಯ ಸೇವೆಯನ್ನು ಪರಿಗಣಿಸಿ ರಾಜೀವ್‌ಗಾಂಧಿ, ಏಕತಾ ಪ್ರಶಸ್ತಿ, ಗ್ಲೋರಿ ಆಫ್ ಇಂಡಿಯಾ ಸೇರಿದಂತೆ ಹಲವು ಪ್ರತಿಷ್ಠಿತ ಪ್ರಶಸ್ತಿಗಳು ಇವರಿಗೆ ಸಂದಿವೆ.

ಅರೆಭಾಷಿಕ ಗೌಡ ಜನಾಂಗದ ಮುತ್ತು ರತ್ನಗಳ ಮೇರುವ್ಯಕ್ತಿಯಾಗಿರುವ ಇವರಿಗೆ ಕುಲದೈವ ತಿರುಪತಿ ತಿಮ್ಮಪ್ಪನ ಅನುಗ್ರಹ ವಲ್ಲದೆ ಜನಾಂಗದ ಆಶೀರ್ವಾದವು ಇರಲೆಂಬುದಾಗಿ "ಕೊಡಗು ಸಂಗಾತಿ" ಹೃತ್ಪೂರ್ವಕವಾಗಿ ಆಶಿಸುತ್ತದೆ.

○

ಏಳಿ, ಎದ್ದೇಳಿ ! ನಿಲ್ಲದಿರಿ – ಗುರಿ ಮುಟ್ಟುವತನಕ ನಿಲ್ಲದಿರಿ.

ಪ್ರಿಯ ವಿದ್ಯಾರ್ಥಿಗಳೆ,

ಸಾಹಸ, ಸಾಧನೆಗಳ ಪರಿಪೂರ್ಣತೆಗೆ ತುಡಿಯುವ ಪ್ರಚಂಡ ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಗಳ ಸಾಗರವೇ ನಿಮ್ಮ ಅಂತರ್ಯದಲ್ಲಿದೆ. ತೀವ್ರ ಜ್ಞಾನಶಕ್ತಿ, ದೃಢ ನಿಷ್ಠೆ, ನಲುಗದ ಏಕಾಗ್ರತೆ, ಅಚಲ ಶ್ರದ್ಧೆ, ಬಿಡದ ಛಲಗಳಿಂದ ನೀವು ಸತತ ಪ್ರಯತ್ನದ ದಾರಿ ಹಿಡಿದರೆ ಅದ್ಭುತ ಯಶಸ್ಸು ನಿಮ್ಮದಾಗಲೇ ಬೇಕು–ಇದು ಸತ್ಯ! ಸತ್ಯ!!

ನಿಮ್ಮ ಬಾಳನ್ನು ಬೆಳಗಿಸಿಕೊಳ್ಳುವ ಸುವರ್ಣಾವಕಾಶ ನಿಮಗೀಗ ದೊರೆತಿದೆ. ಕಾಲ ಮಿಂಚುವ ಮೊದಲೇ ಜಾಗ್ರತರಾಗಿ! ನಿಮ್ಮ ಏಳ್ಗೆಗೆ ನೀವೆ ಶಿಲ್ಪಿಗಳು. ನವ ಯುವಕ ಯುವತಿಯರೇ ಜಾಗ್ರತರಾಗಿ ಎದ್ದೇಳಿ.

ಬಲಾಢ್ಯರಾಗಿ, ಶೂರರಾಗಿ, ಧೀರರಾಗಿ. ಶಕ್ತಿಯೇ ಜೀವನ, ದೌರ್ಬಲ್ಯವೆ ಮರಣ. ನಿಮ್ಮಲ್ಲಿರುವ ದೌರ್ಬಲ್ಯದ ನಿವಾರಣೋಪಾಯ, ಆ ದೌರ್ಬಲ್ಯವನ್ನೆ ಕುರಿತು ಮತ್ತೆಮತ್ತೆ ಚಿಂತಿಸುವುದಲ್ಲ. ನಿಮ್ಮ ಅಂತರ್ಯದಲ್ಲಿರುವ ಆ ದಿವ್ಯ ಶಕ್ತಿಯ ಸಾಗರವನ್ನೇ ಕುರಿತು ಚಿಂತಿಸುವುದು. ನೀವು ಮಾಡುವ ಪ್ರತಿಯೊಂದು ಆಲೋಚನೆಯೂ ,ಕೆಲಸವೂ ನಿಮ್ಮಮನಸ್ಸಿನಲ್ಲಿ ತನ್ನದೇ ಆದ ಪರಿಣಾಮವನ್ನುಂಟುಮಾಡದಿರದು. ಕೆಟ್ಟ ಆಲೋಚನೆ, ಕೆಟ್ಟ ಚಾಳಿಗಳ ಪರಿಣಾಮಗಳು ನಿಮಗೆ ಕೇಡು ಬಗೆಯಲು ಹಸಿದ ಹೆಬ್ಬುಲಿಯಂತೆ ನಿಮ್ಮ ಮೇಲೆ ಎರಗಲು ಸಿದ್ಧವಾದರೆ, ನೀವು ಮಾಡಿದ ಒಳ್ಳೆಯ ಆಲೋಚನೆಗಳ ಮತ್ತು ಸತ್ಕಾರ್ಯಗಳ ಫಲ, ಲಕ್ಷಾಂತರ ದೇವ ಗಣಗಳ ಇಚ್ಛಾ ಸಾಮರ್ಥ್ಯದೊಂದಿಗೆ ನಿಮ್ಮ ಉದ್ಧಾರಕ್ಕೆ ನೆರವಾಗುತ್ತದೆಂಬುದು ಖಂಡಿತವಾಗಿಯೂ ಸತ್ಯ.

ಇಂದೀಗ ನಮ್ಮ ಜನಾಂಗಕ್ಕೆ ಬೇಕಾಗಿರುವುದು ಕಬ್ಬಿಣದ ಮಾಂಸ ಖಂಡಗಳೂ, ಉಕ್ಕಿನ ನರಗಳು ಇರುವ ಸಚ್ಚಾರಿತ್ರ್ಯದ ಪರಂಜ್ಯೋತಿಗಳು, ವೈನತೆತ್ತ ಇಚ್ಛಾ ಶಕ್ತಿಗಳು, ಜ್ಞಾನಶಕ್ತಿ, ಕ್ರಿಯಾ ಶಕ್ತಿಗಳಂತಿರುವ ಪುರುಷ ಸಿಂಹರು, ಶ್ರದ್ಧಾಭಕ್ತಿ ಸಂಪನ್ನ ದೇವದಾಸರು, ಜೀವ ಶಿವಸೇವಾ ದುರಂಧರರಾದ ಕರ್ಮವೀರರು, ಆತ್ಮ ವಿಶ್ವಾಸದ ಮೇರುಗಳಾಗಿ ಏನನ್ನೂ ಸಾಧಿಸಬಲ್ಲೆವೆಂಬ ಕಚ್ಚೆದೆಯ ಕಡುಗಲಿಗಳು, ಪರಾಕ್ರಮ ಕಂಠೀರವರು.

ಏಳಿ, ಎದ್ದೇಳಿ ! ಗೌಡ ಮರಿ ಸಿಂಹ, ಸಿಂಹಿಣಿಗಳೆ, ಎಲ್ಲಾ ತರದ ಅಂಜಿಕೆ, ಕೀಳರಿಮೆ, ದ್ವೇಷ, ಮತ್ಸರ, ಹೊಟ್ಟೆಕಿಚ್ಚು, ಅಹಂಕಾರ ಇತ್ಯಾದಿ ಸರ್ವ ಕೆಟ್ಟ ಗುಣಗಳನ್ನು, ಆಲಸ್ಯಗಳನ್ನು ಕಿತ್ತೊಗೆದು, ಧೈರ್ಯೋತ್ಸಾಹಗಳಿಂದ, ಹಿರಿಯರ ಆಶೀರ್ವಾದಗಳೊಂದಿಗೆ ಮುನ್ನುಗ್ಗಿ. ಏನೇ ಬರಲಿ, ನಿರ್ಭಯರಾಗಿ ಎದುರಿಸಿ ಹೋರಾಡಿ! ಈ ಜಗತ್ತಿನಿಂದ ಕಣ್ಮರೆಯಾಗುವ ಮೊದಲೆ ಉತ್ಕೃಷ್ಟ, ಉನ್ನತ ಸಾಹಸ–ಸಾಧನೆ ನಿಮ್ಮದಾಗಿರಲಿ ! ಏಳಿ, ಎದ್ದೇಳಿ! ಗುರಿ ಮುಟ್ಟುವ ತನಕ ನಿಲ್ಲದಿರಿ.

○ ಸಂಗಾತಿ

ನಮ್ಮ ಜಾತಿ

ತಾ॥ ಮೇ ಒಂದರ ಸಂಚಿಕೆಯಲ್ಲಿ "ಹಿಂದುಳಿದ ಜಾತಿ ಸರ್ಟಿಫಿಕೇಟ್" ಬಗ್ಗೆ ಪ್ರೊ॥ ಪೂಜಾರಿ ಮೊಣ್ಣಪ್ಪನವರು ಬಹಳ ಉಪಯುಕ್ತವಾದ ಲೇಖನವನ್ನು ಬರೆದಿದ್ದಾರೆ. ಅದನ್ನು ಓದಿದ ನಂತರ ಉಂಟಾದ ಸಂದೇಹಗಳನ್ನು ಇದೀಗ ನಿಮ್ಮ ಮುಂದೆ ಇಡುತ್ತಿದ್ದೇನೆ.

ನಮಗೆಲ್ಲರಿಗೂ ತಿಳಿದಿರುವ ಹಾಗೆ ನಮ್ಮ ಜಾತಿಯ ಕೆಲವು ಅದೃಷ್ಟವಂತರು ಹಿಂದುಳಿದ ಜಾತಿಯ ಸರ್ಟಿಫಿಕೇಟ್‌ಗಳನ್ನು ಪಡೆದುಕೊಂಡು ಉನ್ನತ ಹುದ್ದೆಗಳನ್ನೂ ಕೂಡ ಅಲಂಕರಿಸಿದ್ದಾರೆ. ಇವರಿಗೆ ಮಾತ್ರ ಈ ಸರ್ಟಿಫಿಕೇಟ್‌ಗಳು ಹೇಗೆ ದೊರೆಯಿತು? ಈ ಪ್ರಶ್ನೆಗೆ ಹಿಂದುಳಿದ ಜಾತಿಯ ಕಮಿಷನರ್ ಏನು ಹೇಳುತ್ತಾರೆ. (ಅದಕ್ಕೂ ಪಟ್ಟಿಯನ್ನು ಕೇಳಬಹುದೇನೊ!)

ಎರಡನೆಯದಾಗಿ ಇಂಗ್ಲಿಷ್‌ನಲ್ಲಿ ನಮ್ಮ ಜಾತಿಯನ್ನು 'GOWDA' ಎಂದು ಬರೆಯುವುದರಿಂದ ಮತ್ತು ಹಿಂದುಳಿದ ಜಾತಿಯ ಪಟ್ಟಿಯಲ್ಲಿ 'GOUDA' ಎಂದು ಇರುವುದರಿಂದ ಈ ಸರ್ಕಾರಿ 'GOUDA' ರುಗಳು ರೂಪಿಸಿದ ಕಾನೂನಿನಲ್ಲಿ 'U' ಬದಲು 'W' ಉಪಯೋಗಿಸುವುದರಿಂದ ಸಾವಿರಾರು ಕೊಡಗು ಮತ್ತು ದ.ಕ. ಜಿಲ್ಲೆಯ ಅರೆಭಾಷೆ ಗೌಡರಿಗೆ ಅನ್ಯಾಯವಾಗಿದೆ. 'GOWDA' ಹಾಗೂ 'GOUDA' ಇವೆರಡನ್ನೂ ಆಡಳಿತ ಭಾಷೆಯಲ್ಲಿ 'ಗೌಡ' ಎಂದೇ ಬರೆಯುತ್ತಾರೆ. ಹಾಗಿದ್ದಾಗ ಸರ್ಕಾರ ಮಾಡಿದ ಅನುಕೂಲತೆಗಳನ್ನು ಕೆಲವರಿಂದ ಕಸಿದುಕೊಂಡು ಉಣ್ಣುವ ಪ್ರವೃತ್ತಿ ಈ "GOUDA" ರದು ಎಂದು ನನ್ನ ಭಾವನೆ. ಮೀಸಲಾತಿಯ ಮೂಲ ಉದ್ದೇಶ ಹಾಗೂ ಮಾನದಂಡ "ಆರ್ಥಿಕ ಸ್ಥಿತಿ" ಇದನ್ನಷ್ಟೆ ಗಮನಕ್ಕೆ ತೆಗೆದುಕೊಳ್ಳಬೇಕೇ ಹೊರತು ಈ 'W' ಮತ್ತು 'U' ಅಲ್ಲ. ಎಲ್ಲರಿಗೂ ತಿಳಿದಿರುವಂತೆ ಈ 'U' ಗಳು ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಪ್ರಾಬಲ್ಯ ಹೊಂದಿದ್ದಾರೆ.

ಪ್ರೊ॥ ಪೂಜಾರಿ ಮೊಣ್ಣಪ್ಪನವರು ರಾಷ್ಟ್ರೀಯ ಹಿಂದುಳಿದ ಕಮಿಷನರ್‌ರವರನ್ನು ಭೇಟಿ ಮಾಡಿ ಈ ವಿಷಯದಲ್ಲಿ ಸಾಕಷ್ಟು ಶ್ರಮ ವಹಿಸಿರುವುದು ನಿಜವಾಗಿಯೂ ಶ್ಲಾಘನೀಯ. ಆದರೆ ಕಮಿಷನ್ ಕೇಳಿರುವ ಪ್ರಶ್ನೆಗಳು ಕಾನೂನಿನ ಪ್ರಕಾರ ಸರಿಯಾಗಿದ್ದರೂ ಆಚರಣೆಯಲ್ಲಿ ತರಲು ಸಾಧ್ಯವಾಗದಂತವುಗಳು. ಎಸ್.ಎಸ್.ಎಲ್.ಸಿ. ಯಿಂದ ಹಿಡಿದು ಡಾಕ್ಟರೇಟ್ ಡಿಗ್ರಿಯವರೆಗೆ ಅಲ್ಲದೆ ಬೇರೆ ಬೇರೆ ವಿಧದ ಪದವಿಗಳ ವಿಷಯದಲ್ಲಿಯೂ ತಾಲ್ಲೂಕು, ಜಿಲ್ಲೆ ಹಾಗೂ ರಾಷ್ಟ್ರದ ಶೇಖಡವಾರು ಸಂಖ್ಯೆಗಳನ್ನು ನಾವೇ ಪಟ್ಟಿ ಮಾಡಿ ಅವರಿಗೆ ಕೊಡಬೇಕಂತೆ! ಇದನ್ನೆಲ್ಲ ನಾವೇ ಕೊಡುವುದಾದರೆ ನಮಗೆ ಹೇಗೆ ಬೇಕೊ ಹಾಗೆ ಸತ್ಯವನ್ನು ಮರೆಮಾಚಲು ಅವರೇ ಅನುಮತಿ ಕೊಟ್ಟಂತಾಗುವುದಿಲ್ಲವೆ? ಈ ಅಂಕಿ ಅಂಶಗಳನ್ನು ಕಲೆ ಹಾಕಲು ಸರಕಾರಕ್ಕಲ್ಲದೆ ಆಯಾ ಜಾತಿಗಳಿಗೆ ಸಾಧ್ಯವಿದೆಯೆ? ಅಲ್ಲದೆ ಈಗ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಹಿಂದುಳಿದ ಜಾತಿಯ ಪಟ್ಟಿಯಲ್ಲಿರುವವರೆಲ್ಲರೂ ಹೀಗೆ ಸರ್ವೆ ಮಾಡಿ ಅವರಿಗೆ ವರದಿ ಒಪ್ಪಿಸಿದ್ದಾರೆಯೆ? ಅದರ ವಿವರ ಹಿಂದುಳಿದ ಕಮಿಷನ್ ಹತ್ತಿರವಿದೆಯೇ? ಇದ್ದರೂ ಅದು ಸರಿಯಾಗಿದೆಯೆಂದು ಅವರು ಧೃಢೀಕರಿಸುತ್ತಾರೆಯೇ? ಇಂತಹ ಕ್ಷುಲ್ಲಕ ಕಾರಣಗಳಿಂದ ಆರ್ಥಿಕವಾಗಿ ಬಹಳಷ್ಟು ಹಿಂದಿರುವ ನಮ್ಮ ಜನಾಂಗಕ್ಕೆ ನಿಜವಾಗಿಯೂ ಅನ್ಯಾಯವಾಗಿದೆ. ಇಂತಹ ಕಾನೂನನ್ನು ನಮ್ಮ ಜನಾಂಗ ಅಜ್ಞಾನದಿಂದ ಪ್ರತಿಭಟಿಸದೇ ಇರುವುದು ನಿಜಕ್ಕೂ ಖೇಧಕರ. ಕರ್ನಾಟಕದ ಅತೀ ಮುಂದುವರಿದ ಒಂದು ಜಾತಿ ಎಂದರೆ ಲಿಂಗಾಯಿತರದು. ಇವರಿಗೂ ಕೆಲವರಿಗೆ ಮೀಸಲಾತಿಯ ಪ್ರಯೋಜನ ಸಿಗುತ್ತಿದೆ. ಆದರೆ ನಮ್ಮ ಜನಾಂಗದವರಿಗೆ ಸಿಗುತ್ತಿಲ್ಲವೆಂದರೆ ನಿಜವಾಗಿಯೂ ಆಶ್ಚರ್ಯದ ಸಂಗತಿ. ಯಾರಿಗೂ ಮೀಸಲಾತಿ ಇಲ್ಲವೆಂದಿದ್ದರೆ ನಾವೂ ಕೇಳುತ್ತಿರಲಿಲ್ಲ. ಆದರೆ ನಮಗಿಂತ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯದಲ್ಲಿ ಮುಂದುವರಿದವರಿಗೂ ಎಲ್ಲಾ ಸವಲತ್ತುಗಳು ಸಿಗುತ್ತಿದೆ. ಆದರೆ ನಮಗೆ ಇಲ್ಲವೆಂದರೆ ನಮ್ಮ ಬಾವಿಯೊಳಗಿನ ಕಪ್ಪೆಗಳ ಪ್ರವೃತಿಯೇ ಕಾರಣವೆಂದು ನನ್ನ ಭಾವನೆ.

ಈಗಲಾದರೂ ಪ್ರೊ॥ ಪೂಜಾರಿ ಮೊಣ್ಣಪ್ಪನವರಂತಹ ಧೀಮಂತ ವ್ಯಕ್ತಿಯ ಮಾರ್ಗದರ್ಶನದಲ್ಲಿ ಹಾಗೂ "ಕೊಡಗು ಸಂಗಾತಿ"ಯ ನೇತೃತ್ವದಲ್ಲಿ [ಇವರ ಅನುಮತಿಯೊಂದಿಗೆ] ನಮ್ಮ ಹಕ್ಕನ್ನು ಪಡೆಯಲು ತೀರ್ಮಾನಿಸೋಣವೆ?

● **ಉಳುವಾರನ ಸುರೇಶ್‌ಕುಮಾರ್,** ನಿಪ್ಪಾಣಿ.

ನಿಮಗಿದು ತಿಳಿದಿರಲಿ

1 ಭಾರತದ ಅತೀ ದೊಡ್ಡ ಯಾತ್ರಾ ಸ್ಥಳ ಯಾವುದು?
2 ಭಾರತದ ಕೆಂಪು ನದಿ ಎಂದು ಯಾವ ನದಿಗೆ ಹೆಸರಿದೆ?
3 ಕಾಮಾಕ್ಯ ದೇವಾಲಯ ಇರುವುದೆಲ್ಲಿ?
4 ಭಾರತದಲ್ಲಿ ಮೂರು ಸಮುದ್ರಗಳು ಸೇರುವುದೆಲ್ಲಿ?
5 ದೆಹಲಿಗಿದ್ದ ಹಳೆಯ ಹೆಸರು ಯಾವುದು?
6 "ಸಂಗೀತ ರಾಜ"ದ ಕೃತಿಕಾರರು ಯಾರು?
7 30,000ಕ್ಕೂ ಹೆಚ್ಚು ಚಿತ್ರಗೀತೆಗಳನ್ನು ಹಾಡಿರುವ ಕಲಾವಿದೆ ಯಾರು?
8 ತನ್ನ ಮೂಗನ್ನು 10 ಲಕ್ಷ ಡಾಲರ್‌ಗಳಿಗೆ ವಿಮೆ ಮಾಡಿಸಿದ್ದ ಹಾಸ್ಯ ನಟ ಯಾರು?
9 ನಾಟ್ಯ ಶಾಸ್ತ್ರವನ್ನು ಬರೆದವರು ಯಾರು?

1 ಹೇಮಕುಂಡ 2 ಬ್ರಹ್ಮಪುತ್ರ 3 ಗೌಹಾಟಿ
4 ಕನ್ಯಾಕುಮಾರಿ 5 ಮಹಾರಾಣ ಕುಂಭಕರ್ಣ 7 ಲತ
ಮಂಗೇಶ್ಕರ್ 8 ಜಿಮ್ಮಿ ಡುರಾಂಟ್ 9 ಭರತ ಮುನಿ

● ಸಂಗ್ರಹ : ಪೆರ್ಬ್ಬಾಯಿ ಆರ್.ಜಯಲಕ್ಷ್ಮಿ, ಸಿದ್ದಾಪುರ

ಗೌಡಕೇಸರಿ ನಿಡ್ಯಮಲೆ ಮುದ್ದಪ್ಪನವರ ಜೀವನ ಚರಿತ್ರೆ

ಭಾಗ - ೨

[ಹಿಂದಿನ ಸಂಚಿಕೆಗೆಯಿಂದ]

ಇವರು ಬಿ.ಎ. ಪದವಿಯನ್ನು ಸೆಂಟ್ ಆಲೋಸಿಯಸ್ ಕಾಲೇಜಿನಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿ ಮದರಾಸ್ ಲಾ ಕಾಲೇಜ್‌ನಲ್ಲಿ ಬಿ.ಎಲ್. ಪದವಿ ಓದಿ ಅಲ್ಲಿಯೂ ರ್‍ಯಾಂಕ್‌ನಲ್ಲಿ ತೇರ್ಗಡೆಯಾಗಿ ಕೊಡಗು ಮತ್ತು ದಕ್ಷಿಣ ಕನ್ನಡದ ಗೌಡ ಜನಾಂಗದಲ್ಲಿ ಪ್ರಪ್ರಥಮ ಪಧವೀಧರರೂ ಪ್ರಪ್ರಥಮ ವಕೀಲರೂ ಆಗಿ ಶ್ರೀ ಮುದ್ದಪ್ಪನವರು ಹೊರ ಹೊಮ್ಮಿದರು.

ಇವರು ಹಿಂದಿನ ಕೊಡಗು ರಾಜ್ಯದಲ್ಲಿ ಚೀಫ್ ಕಮೀಷನರ್‌ಗೆ ಸಲಹೆ ಕೊಡುವ ಕೌನ್ಸಿಲಿನ ಸದಸ್ಯತನದ ಚುನಾವಣೆಯ ಸಮಯದಲ್ಲಿ 1924ರಲ್ಲಿ ಇವರ ವಿರೋಧಿಗಳು ಅವರನ್ನು ಕೊಲ್ಲಬೇಕೆಂಬ ಸಂಚು ಪಡಿಸಿ, ಇವರು ಮಡಿಕೇರಿ ತಾಲ್ಲೂಕಿನ ಕಾರುಗುಂದ ಗ್ರಾಮದಲ್ಲಿ ಚುನಾವಣೆ ಪ್ರಚಾರಕ್ಕಾಗಿ ಹೋಗಿದ್ದಾಗ ಅಲ್ಲಿ ಇವರ ವೈರಿಗಳು ಇವರನ್ನು ಹೊಡೆದು ಹತ್ಯೆಗೈಯುವ ಸುದ್ದಿ ಅಲ್ಲಿನ ಜನಾಂಗದವರಿಗೆ ತಿಳಿದಾಗ ಶ್ರೀಮುದ್ದಪ್ಪನವರನ್ನು ಗುಪ್ತವಾಗಿ ಕಾಡುದಾರಿಯಲ್ಲಿ ಕೊಂಡೊಯ್ದು ಮರ್ನಾಡಿನ ಮಾರ್ಗವಾಗಿ ಮಡಿಕೇರಿಗೆ ಸಾಗಿಸಿದರು. ಇವರ ಹಣದ ಬರುವಿಕೆಯನ್ನು ರಾಜಾ ಸೀಟಿನಲ್ಲಿ ಕುಳಿತು ನಿರೀಕ್ಷಿಸುತ್ತಿದ್ದ ಇವರ ವಿರೋಧಿಗಳಿಗೆ ಬಹಳಷ್ಟು ನಿರಾಶೆಯಾಗಿತ್ತು. ಆ ಕಡೆ ಕಾರುಗುಂದದಲ್ಲಿ ಇವರನ್ನು ಕೊಲ್ಲಲೆಂದು ಬಂದವರಿಗೆ ಮುದ್ದಪ್ಪನವರ ಪರಿಚಯ ಸರಿಯಾಗಿ ಗೊತ್ತಿಲ್ಲದ್ದರಿಂದ ಆದೇ ಸಭೆಗೆ ಆಗಮಿಸಿದ್ದ ದಿವಂಗತ ಶ್ರೀ ವೆಂಕಪಯ್ಯ ವಕೀಲರ ಹತ್ತಿರ ಬಂದು ಅವರೇ ಮುದ್ದಪ್ಪನವರೆಂದು ಊಹಿಸಿ, ಅವರಿಗೆ ಬಗ್ಗಿ ನಮಸ್ಕರಿಸಿ, ಶ್ರೀ ವೆಂಕಪಯ್ಯನವರು ಬಗ್ಗಿದಾಗ ಬೆನ್ನ ಹಿಂದೆ ಇಟ್ಟಿದ್ದ ದೊಣ್ಣೆಯಿಂದ ವೆಂಕಪಯ್ಯನವರ ತಲೆಗೆ ಹೊಡೆದು ಅವರು ಧರಿಸಿದ ರುಮಾಲಿನ ಮೇಲೆ ಪೆಟ್ಟುಬಿದ್ದುದ್ದರಿಂದ ವೆಂಕಪಯ್ಯನವರಿಗೆ ಪ್ರಾಣಾಪಾಯವಾಗದೆ ಸ್ವಲ್ಪ ಗಾಯವಾಗಿ ಬದುಕಿಕೊಂಡರೆಂದು ನಮ್ಮ ಮನೆ ಅಜ್ಜ ದಿವಂಗತ ಪೂವಯ್ಯನವರು ಹೇಳಿದ್ದನ್ನು ನಾನು ಕೇಳಿದ್ದೇನೆ. ಆ ಚುನಾವಣೆಯಲ್ಲಿ ಶ್ರೀ ಮುದ್ದಪ್ಪನವರು ಕೊಡಗಿನ ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಆಯ್ಕೆಯಾದರು. ಇವರು ಸ್ವಲ್ಪ ವರ್ಷಗಳ ಕಾಲ ಮಡಿಕೇರಿಯಲ್ಲಿ ವಕೀಲರಾಗಿ, ನಂತರ 1933ರಲ್ಲಿ ವೀರರಾಜಪೇಟೆಯಲ್ಲಿ ಮುನ್ಸಿಫ್ ಆಗಿ ನೇಮಕಗೊಂಡರು. ಇಲ್ಲಿದ್ದಾಗಲೂ ಸಹ ಇವರಿಗೆ ಔತಣಕೂಟವನ್ನು ಏರ್ಪಡಿಸಿ, ಆಹಾರದಲ್ಲಿ ವಿಷವನ್ನು ಹಾಕಿ ಇವರನ್ನು ಕೊಲ್ಲುವ ಸಂಚು ನಡಿತ್ತೆಂದೂ ಆದರೆ ಇವರ ಹಿತೈಷಿಗಳು ಇದನ್ನು ಕಂಡುಹಿಡಿದು ಈ ದುಷ್ಕೃತ್ಯದಿಂದ ಪಾರು ಮಾಡಿದರೆಂದು ಹೇಳುತ್ತಾರೆ. ಶ್ರೀ ಮುದ್ದಪ್ಪನವರು ಕೊಡಗು ಗೌಡ ವಿದ್ಯಾಸಂಘದ ಅಧ್ಯಕ್ಷರಾಗಿ 1926-27, 1936-37, 38-39 1940-49ರ ವರ್ಷಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಇವರು ಅಧ್ಯಕ್ಷರಾಗಿದ್ದಾಗ ಇವರೊಡನೆ ದಿ|| ಶ್ರೀ ಪೇರಿಯನ ಪೂವಯ್ಯನವರು ಕಾರ್ಯದರ್ಶಿಯಾಗಿದ್ದು ಕೊಡಗಿನ ಮೂಲೆ ಮೂಲೆಗಳಲ್ಲಿ ವಿದ್ಯಾ ಸಂಘದ ಗ್ರಾಮ ಮತ್ತು ವಲಯ ಸಮಿತಿಯನ್ನು ರಚಿಸಿ, ಅಲ್ಲಲ್ಲಿ ವಿದ್ಯಾಸಂಘದ ಕಾರ್ಯಕಾರಿ ಮಂಡಳಿಯ ಸಭೆಗಳನ್ನು ನಡೆಸಿ ಸಮಾಜದ ಜನರಿಗೆ ವಿದ್ಯಾಸಂಘದ ಚಟುವಟಿಕೆಗಳನ್ನು ವಿವರಿಸಿ,ಮಡಿಕೇರಿಯ ಗೌಡ ಬೋರ್ಡಿಂಗ್‌ಗೆ ಹೆಚ್ಚು ಮಂದಿ ವಿದ್ಯಾರ್ಥಿಗಳು ಸೇರಿ ವಿದ್ಯಾಭ್ಯಾಸವನ್ನು ಮಾಡಿ ವಿದ್ಯೆಯಲ್ಲಿ ಮುಂದುವರಿಯಬೇಕೆಂದು ಉಪದೇಶಿಸುತ್ತಿದ್ದರು.

ಇದೇ ರೀತಿ ದಕ್ಷಿಣ ಕನ್ನಡ ಜಿಲ್ಲೆಯ ವಿದ್ಯಾಸಂಘದ ಮೇಲೆ ಕೂಡ ಗಮನಹರಿಸಿ ಅಲ್ಲಿಯ ವಿದ್ಯಾ ಸಂಘದ ಚಟುವಟಿಕೆಗಳಲ್ಲಿ ಅನೇಕ ಸಲ ಭಾಗವಹಿಸಿದ್ದರು.

ಶ್ರೀ ಮುದ್ದಪ್ಪನವರು 1929ರಲ್ಲಿ ಭಾರತದ ವೈಸ್ ರಾಯರಾಗಿದ್ದ ಲಾರ್ಡ್ ಇರ್‌ವಿನ್‌ರವರು ಕೊಡಗಿಗೆ ಭೇಟಿ ಕೊಟ್ಟಾಗ ಕೊಡಗಿನ ಗೌಡರ ಮುಖಂಡರನ್ನು ಸೇರಿಸಿ ಬೇಡಿಕೆಗಳ ವಿಷಯದಲ್ಲಿ ಒಂದು ಭಿನ್ನವತ್ತಳೆ ಸಲ್ಲಿಸಿ, ಕೊಡಗಿನಲ್ಲಿ ಗೌಡ ಜನಾಂಗದ ಇರುವಿಕೆಯನ್ನು ಮನನ ಮಾಡಿಸಿದರು.

... ಪ್ರೊ|| ಪೂಜಾರಿ ಮೊಣ್ಣಪ್ಪ

ಶ್ರೀಮುದ್ದಪ್ಪನವರು ಕೊಡಗಿನಡಿಸ್ಟ್ರಿಕ್ ಮತ್ತು ಸೆಷನ್ಸ್ ಜಡ್ಜ್‌ರಾದವರಲ್ಲಿ ಮೊತ್ತ ಮೊದಲಿಗರು ಇವರಿಗಿಂತ ಮೊದಲು ಕೊಡಗಿಗೆ ಜ್ಯುಡಿಷಿಯಲ್ ಕಮೀಷನರ್‌ರವರ ಕೈ ಕೆಳಗೆ ಸಬ್‌ಜಡ್ಜ್ ಕೊಡಗಿನ ನ್ಯಾಯಾಂಗ ಇಲಾಖೆಯ ಮುಖ್ಯಸ್ಥರಾಗಿದ್ದರು. ಆದರೆ ಮುದ್ದಪ್ಪನವರೇ ಮೊತ್ತ ಮೊದಲ ಡಿಸ್ಟ್ರಿಕ್ ಮತ್ತು ಸೆಷನ್ಸ್ ಜಡ್ಜ್ ಆಗಿ ಅವರ ನಂತರ ಗೌಡರಲ್ಲಿ ಯಾರೂ ಇಲ್ಲಿಯವರೆಗೆ ನೇಮಕವಾಗಿಲ್ಲವೆಂದು ಹೇಳುವುದಕ್ಕೆ ಖೇದನೀಯವಾಗಿದೆ. ಅದೇ ರೀತಿ ಇವರ ತಮ್ಮ ದಿವಂಗತ ಶ್ರೀ ಸೋಮಣ್ಣನವರೇ ಗೌಡರಲ್ಲಿ ಸ್ವಾತಂತ್ರ್ಯದ ನಂತರ ಲೋಕಸಭಾ ಸದಸ್ಯರಾದವರು. ಅನಂತರ ಯಾರೊಬ್ಬ ಕೊಡಗಿನ ಗೌಡರೂ ಲೋಕಸಭಾ ಸದಸ್ಯರಾಗಲಿಲ್ಲ. ದಿವಂಗತ ನಿಡ್ಯಮಲೆ ರಾಮಪ್ಪನವರ ಇಬ್ಬರು ಸುಪುತ್ರರು ಕೊಡಗಿನ ಗೌಡರ ಚರಿತ್ರೆಯಲ್ಲಿ ಅವರು ಕೈಗೊಂಡ ಪ್ರವೃತ್ತಿಯಲ್ಲಿ ಮೇಲ್ಪಟ್ಟದ ಯಶಸ್ಸನ್ನು ಸಾಧಿಸಿ ತೋರಿಸಿದ್ದಾರೆ. ಇವರಿಬ್ಬರು ಸಿಂಹದ ಮರಿಗಳಂತೆ ತನ್ನ ಸಮಾಜದ ಏಳಿಗೆಗಾಗಿ ಶ್ರಮಿಸಿದ್ದಾರೆ ಜನಪ್ರಿಯ ನಾಯಕರಾಗಿ ಹೆಸರುಗಳಿಸಿದ್ದಾರೆ. ಶ್ರೀ ಮುದ್ದಪ್ಪನವರು ತನ್ನ ಸಮಾಜದ ತನ್ನ ತನವನ್ನು ಗಳಿಸುವುದಕ್ಕಾಗಿ ಹೋರಾಟ ಮಾಡಿದ್ದಾರೆ. ವಿಮುಕ್ತ

[ಮುಂದುವರಿಯುವುದು]

ಕುಪ್ಪಸದಟ್ಟಿ ಗೌಡರ ಪೋಷಾಕೆ ?

ತಾ 7-5-98ರಲ್ಲಿ ಪಿರಿಯಾಪಟ್ಟಣದಲ್ಲಿ ನಡೆದ ಕೊಡಗು ಗೌಡ ವಿದ್ಯಾಸಂಘದ [ಪಿರಿಯಾಪಟ್ಟಣ] ಆಶ್ರಯದಲ್ಲಿ ನಡೆದ ಸಭೆಯಲ್ಲಿ ಒಬ್ಬ ಯುವಕರು ಕುಪ್ಪಸದಟ್ಟಿಯ ಉಡುಪನ್ನು ಕೊಡಗಿನ ಗೌಡರು ತೊಟ್ಟುಕೊಳ್ಳುವ ವಿಷಯ ಸಭೆಯಲ್ಲಿ ಪ್ರಸ್ತಾಪಿಸಿ, ಈ ವಿಷಯದಲ್ಲಿ ಹಿರಿಯರು ತಕ್ಕ ಮಾಹಿತಿಯನ್ನು ಯುವ ಜನಾಂಗಕ್ಕೆ ನೀಡಬೇಕೆಂದು ಕೇಳಿಕೊಂಡಿದ್ದ ಮೇರೆಗೆ ಈ ಲೇಖನವನ್ನು ಬರೆಯಲಾಗಿದೆ.

ಕೊಡಗಿನ ಕುಪ್ಪಸದಟ್ಟಿ ಮತ್ತು ರುಮಾಲೆ ಒಂದು ವಿಶಿಷ್ಟವಾದ ಉಡುಪು. ಅದು ಹೇಗೆ ಕೊಡಗಿಗೆ ಬಂತು ಎಂಬ ವಿಷಯ ಅದರ ಚಾರಿತ್ರಿಕ ಹಿನ್ನೆಲೆಯನ್ನು ಶೋಧಿಸಬೇಕಾಗಿದೆ. ಆದರೆ ಕೊಡಗಿನ ಗೌಡರು ಕುಪ್ಪಸ ದಟ್ಟಿ ಹಾಗೂ ರುಮಾಲೆಯನ್ನು ಧರಿಸುವುದಕ್ಕೆ ನನ್ನ ಮನೆಯ ಹಿರಿಯರು ಹೇಳುತ್ತಿದ್ದ ಪ್ರಕಾರ ನಾನು ಈ ಹಿಂದೆ ಬರೆದ 1799ರಲ್ಲಿ ದೊಡ್ಡವೀರ ರಾಜೇಂದ್ರ ಒಡೆಯರು ಏರ್ಪಡಿಸಿದ ಸತ್ಕಾರ ಕೂಟ" ಎಂಬ ಲೇಖನದಲ್ಲಿ ಹೇಳಿದ್ದೇನೆ. ಕುಪ್ಪಸದಟ್ಟಿ ರುಮಾಲೆ ಕೊಡಗು ರಾಜರ ಕಾಲದಲ್ಲಿ ಪ್ರತಿಯೊಬ್ಬ ಜಮ್ಮಾದ ರೈತನು ರಾಜ ದರ್ಬಾರಿಗೆ ಹೋಗುವಾಗ ಕುಪ್ಪಸ ದಟ್ಟಿ ರುಮಾಲೆಯನ್ನು ಧರಿಸಿ ಹೋಗಬೇಕಿತ್ತು. ಅಲ್ಲದೆ ಯುದ್ಧಕ್ಕೆ ಹೋಗುವಾಗಲೂ ಹಾಗೂ ಹುತ್ತರಿ ಹಬ್ಬ, ನಾಡಿನ ದೇವಸ್ಥಾನದ ಹಬ್ಬ, ಗ್ರಾಮದ ಹಬ್ಬಗಳಿಗೆ ಅಲ್ಲಿಯ ಕುಣಿತಗಳಿಗೆ ಭಾಗವಹಿಸುವಾಗ ಕುಪ್ಪಸ ದಟ್ಟಿ ರುಮಾಲೆಯನ್ನು ಹಾಕಿಕೊಂಡೇ ಹೋಗಬೇಕೆಂಬ ಕಟ್ಟು ಕಟ್ಟಳೆ ಇತ್ತು. ಈಗಲೂ ಇದೆ. ಅದೇ ರೀತಿ ಆಗಿನ ಕಾಲದಲ್ಲಿ ಗೌಡ ಮದುಮಣ್ಣನು ಕುಪ್ಪಸದಟ್ಟಿಯಲ್ಲೆ ಮದುಮಣ್ಣನಾಗಿ ಮದುವೆ ಶಾಸ್ತ್ರಗಳೆಲ್ಲಾ ಕಳೆಯುವವರೆಗೆ ಹಾಕಿಕೊಂಡು ಇರಬೇಕಿತ್ತು. ಆದರೆ ಈಗ ಸುಮಾರು 65-70 ವರ್ಷದ ಹಿಂದೆ ನಮ್ಮ ಸಮಾಜದ ಮುಖಂಡರೊಬ್ಬರಿಗೆ ಬೇರೆ ಜಾತಿಯವರಿಂದ ಅವಮಾನವಾಯಿತೆಂಬ ಕಾರಣದಿಂದ ಕುಪ್ಪಸದಟ್ಟಿ ಗೌಡರ ಪೋಷಾಕು ಅಲ್ಲವೆಂಬ ತಪ್ಪು ಭಾವನೆಯಿಂದ ಇನ್ನು ಮುಂದೆ ಗೌಡರು ಕುಪ್ಪಸದಟ್ಟಿ ಹಾಕುವುದನ್ನು ನಿಷೇಧಿಸುವುದಕ್ಕೆ ಪ್ರಚಾರ ಮಾಡಿದರು. ಆದರೆ ಈ ಮುಖಂಡರಿಗೆ ವಿರೋಧವಾಗಿ ಬೇರೆ ಒಂದು ಗುಂಪು ಕುಪ್ಪಸದಟ್ಟಿ, ಜಮ್ಮ ಹಿಡುವಳಿದಾರರಿಗೆ ರಾಜರು ಕೊಟ್ಟ ಪೋಷಾಕು, ಅದನ್ನು ಬದಲು ಮಾಡುವುದಕ್ಕಾಗುವುದಿಲ್ಲವೆಂಬುದಾಗಿ ವಾದಿಸಿದರು. ಗೌಡ ಸಮಾಜದ ಕುಪ್ಪಸದಟ್ಟಿಯು ಕೋಟು ಪಂಚೆಯು ಗೌಡ ಸಮಾಜವೆಂಬುದಾಗಿ ಬಹಿರಂಗವಾಗಿ ಹೇಳಿಕೊಳ್ಳದಿದ್ದರೂ ಒಳಗೊಳಗೆ ದ್ವೇಷ ಹುಟ್ಟಿತ್ತು. ಈ ರೀತಿಯ ಜಗಳ ಸಾಧಾರಣ 20-30 ವರ್ಷಗಳ ಕಾಲ ನಡೆಯಿತು. ಕೆಲವು ಮದುವೆಗಳಲ್ಲಿ ಹೊಡೆದಾಟ ಬಡಿದಾಟದ ಹಂತಕ್ಕೂ ಹೋಗಿ ಕೆಲವರು ಈ ಪೋಷಾಕಿಗಾಗಿ ಹೆಣ್ಣಿಗೆ ತಾಳಿ ಕಟ್ಟುವುದನ್ನು ಬಿಟ್ಟು ನಿಮ್ಮ ಹೆಣ್ಣು ನಮಗೆ ಬೇಡವೆಂದು ಸಿಟ್ಟಿನಲ್ಲಿ ಹೋದ ಪ್ರಸಂಗವೂ ಇದೆ. ಗೌಡ ಸಮಾಜದ ಚರಿತ್ರೆಯಲ್ಲಿ ಇದೊಂದು ದುರದೃಷ್ಟಕರವಾದ ಸಂಗತಿ. ಬರುಬರುತ್ತಾ ಕುಪ್ಪಸದಟ್ಟಿಗೆ ಜಾತಿಯ ಬಣ್ಣ ಕೊಟ್ಟು ಪ್ರಚಾರ ಮಾಡಿದುದರಿಂದ ಗೌಡರು ತಮ್ಮ ಮದುವೆಗಳಲ್ಲಿ ಕೋಟು ಪಂಚೆ ಹಾಕಿ ಮದುವೆ ಮಾಡಲು ಪ್ರಾರಂಭಿಸಿ ಈಗ ಎಲ್ಲಾ ಗೌಡರು ಕೋಟು ಪಂಚೆ ಹಾಕಿ ಮದುವೆ ಕಾರ್ಯ ನೆರವೇರಿಸುತ್ತಾರೆ. ಆದರೆ ಕುಪ್ಪಸದಟ್ಟಿ ಯಾವ ಜಾತಿಯ ಪೋಷಾಕು ಅಲ್ಲ. ಅದು ಕೊಡಗು ದೇಶಿಯ ಪೋಷಾಕು. ಈ ರೀತಿಯ ನಮ್ಮ ಹಿರಿಯರ ಜಗಳದಿಂದ ಈಗಿನ ಪೀಳಿಗೆಗೆ ಗೌಡರ ನಿಜವಾದ ಪೋಷಾಕು ಯಾವುದೆಂಬ ಬಗ್ಗೆ ಸಂಶಯ ಬರಲು ಕಾರಣವಾಗಿದೆ.

ಕುಪ್ಪಸದಟ್ಟಿ ಮತ್ತು ರುಮಾಲೆ ಕೊಡಗಿನ ಎಲ್ಲಾ ಜಮ್ಮಾದ ರೈತರ ಪೋಷಾಕು. ಇದು ಕೊಡಗು ರಾಜರು ತನ್ನ ಜಮ್ಮಾದ ರೈತರಿಗೆ ಕೊಟ್ಟ ಉಡುಪು. ಆಗಿನ ಕಾಲದಲ್ಲಿ ಪ್ರತಿಯೊಬ್ಬ ಜಮ್ಮಾದ ರೈತ ಕುಪ್ಪಸದಟ್ಟಿ ಹಾಕಿ ಅರಮನೆಗೆ ಹೋಗಿ ಪಹರೆ ಕೆಲಸ ಮಾಡಬೇಕಿತ್ತು. ಒಂದೊಂದು ಕುಟುಂಬದಿಂದ ಒಬ್ಬೊಬ್ಬರು ಹೋಗಬೇಕಿತ್ತು. ಇವರನ್ನು ಚಾವಡಿಕಾರರೆಂದು ಕರೆಯುತ್ತಿದ್ದರು. ಆದ್ದರಿಂದ ಕುಪ್ಪಸದಟ್ಟಿ ರುಮಾಲೆ ಒಂದು ಜಾತಿಯ ಪೋಷಾಕು ಅಲ್ಲ. ಗ್ರಾಮದ ಹಬ್ಬಗಳಲ್ಲೂ, ಕಾವೇರಿಸಂಕ್ರಮಣದಲ್ಲೂ ಅಲ್ಲಿನ ತಕ್ಕ ಮುಖ್ಯಸ್ಥರು ಈಗಲೂ ಕುಪ್ಪಸದಟ್ಟಿ ಹಾಕಲೇಬೇಕು.

ಜನರು ತಾವು ನೆಲಸಿದ ಪ್ರದೇಶದ ಪದ್ಧತಿಯನ್ನು ಆಚರಿಸುತ್ತಾರೆ. ಅಲ್ಲಿ ನೆಲೆಸಿದ ಕಟ್ಟುಪಾಡನ್ನು ಅನುಸರಿಸಿ ಅಲ್ಲಿನ ಸಂಸ್ಕೃತಿಯನ್ನು ಅಳವಡಿಸುವ ಸಂದರ್ಭ ಉಂಟಾಗಿ ಅದನ್ನು ಆಚರಿಸುತ್ತಾರೆ. ಕೊಡಗಿನ ಅರೆಭಾಷಿಕರು ಹಿಂದೆ ಆಚರಿಸುತ್ತಿದ್ದ ದೀಪಾವಳಿ, ಬಿಶು ಹಾಗೂ ಕಿಡ್ಡಾಸ ಹಬ್ಬವನ್ನು ದಕ್ಷಿಣ ಕನ್ನಡ ಜಿಲ್ಲೆಯ ಗೌಡರು ಆಚರಿಸುವಂತೆ ಆಚರಿಸುವುದಿಲ್ಲ. ಅದರ ಬದಲು ಕೊಡಗಿನ ಗೌಡರು ಕೈಲ್ ಮುಹೂರ್ತ, ಕಾವೇರಿ ಸಂಕ್ರಮಣ ಹಾಗೂ ಹುತ್ತರಿ ಹಬ್ಬವನ್ನು ಆಚರಿಸುತ್ತಾರೆ. ಜಾತಿ ಪದ್ಧತಿಯಂತೆಯೇ ನಡೆಯುವುದಾದರೆ ಈ ಹಬ್ಬಗಳನ್ನು ಗೌಡರು ಆಚರಿಸುವಂತಿಲ್ಲ. ಇವಕ್ಕೆ ಕೊಡಗಿನ ಗೌಡರ ಪರಿಸರವೇ ಕಾರಣವಾಗಿದೆ. ಅದೇ ರೀತಿ ಕೊಡಗಿನವರು ಕೊಡಗಿನಲ್ಲಿ ಮದುವೆ, ಹಬ್ಬಗಳಲ್ಲಿ ಕುಪ್ಪಸದಟ್ಟಿ ಹಾಕಿ ಸಮಾರಂಭಗಳಲ್ಲಿ ಪಾಲುಗೊಂಡರೂ ಕೊಡಗಿನಿಂದ ಹೊರಗೆ ಇರುವ ಸ್ಥಳಗಳಲ್ಲಾಗಲೀ ತಮ್ಮ ಸಮಾಜ

ದವರಲ್ಲದವರ ಮದುವೆ ಕಾರ್ಯಗಳಲ್ಲಿ ಅವುಗಳನ್ನು ಧರಿಸುವುದಿಲ್ಲ.

ಈ ಕಾರಣಗಳಿಂದಾಗಿ ಕೊಡಗು ಗೌಡ ಸಂಸ್ಕೃತಿ ಸಮ್ಮೇಳನಗಳಲ್ಲಿ ಕುಪ್ಪಸದಟ್ಟಿ ಹಾಕಿರುವುದು ಪರಜಾತಿಯವರ ಅಂಗವಸ್ತ್ರವನ್ನು ತೊಟ್ಟಂತಾಗಲೀ ಅಥವಾ ಬೇರೆಯವರ ಅನುಕರಣೆ ಎಂದಾಗಲೀ ಆಗುವುದಿಲ್ಲ. ಗೌಡ ಸಾಂಸ್ಕೃತಿಕ ಅಕಾಡೆಮಿ ತಮ್ಮ ಸಮಾಜದ ಹಿಂದಿನ ಜನರ ಪದ್ಧತಿಗಳ ಪುನರುದ್ಧಾರಕ್ಕಾಗಿ ಅವುಗಳನ್ನು ಪ್ರದರ್ಶಿಸಿರಬಹುದೇ ಹೊರತು. ಪರಜಾತಿಯವರ ಪೋಷಾಕು ಧರಿಸಿದರೆಂಬುವು ಸರಿಯಲ್ಲವೆಂದು ತಿಳಿಯಬೇಕು.

ಒಂದು ರಾಷ್ಟ್ರದ ಅಥವಾ ಸಮಾಜದ ಹಲವಾರು ಶತಮಾನ ಜೀವನದಲ್ಲಿ ಹೊಸತು ಹಳೆಯದನ್ನು ಮರೆಸುತ್ತದೆ. ಪುನಃ ಹಳೆಯದು ಪುನರೋಚ್ಚಾರವಾಗುತ್ತದೆ. ಮನುಷ್ಯ ಜೀವನ ಒಂದು ಗಾಲಿಯಂತೆ ತಿರುಗುತ್ತಾ ಇರುತ್ತದೆ. ಅದಕ್ಕೆ ವಿರಾಮವಿಲ್ಲ. ಈ ವೈವಿಧ್ಯತೆಯ ಜೀವನದಲ್ಲಿ ಯಾವುದು ನಮ್ಮದು, ಯಾವುದು ನಮ್ಮದಲ್ಲವೆನ್ನುವುದು ಬಹಳ ಕಷ್ಟದ ಕೆಲಸ.ಒಂದು ಮಾತ್ರ ಸತ್ಯ, ಭಾರತೀಯ ಸಂಸ್ಕೃತಿಯಲ್ಲಾಗಲೀ ಅಥವಾ ಹಿಂದೂ ಸಂಸ್ಕೃತಿಯಲ್ಲಾಗಲಿ, ಗೌಡಸಂಸ್ಕೃತಿಯಾಗಲಿ, ವಿವಿಧತೆಯಲ್ಲಿ ಏಕತೆಯಿಂದ ಕೂಡಿದೆ. ಒಂದು ಸಂಸ್ಕೃತಿ ಹೀಗೆಯೇ ಇರಬೇಕು. ಈ ರೀತಿ ಇದ್ದರೆ ಅದು ನಿಜವಾದ ಒಂದು ಸಮಾಜದ ಸಂಸ್ಕೃತಿ ಎಂದು ಹೇಳಲು ಸಾಧ್ಯವಿಲ್ಲ ಮಾನವನ ಸಂಸ್ಕೃತಿ ಕಲ್ಲಿನಂತೆ ನಿಶ್ಚಲವಲ್ಲ.ಅದು ಕಾಲ ಬದಲಾದಂತೆ ಬದಲಾಗುತ್ತಾ ಇರುತ್ತದೆ. ಆ ರೀತಿ ಬದಲಾವಣೆಯಾದರೆ ಮಾತ್ರ ಅಂತಹ ಸಮಾಜವನ್ನು ಸುಸಂಸ್ಕೃತ ಸಮಾಜವೆಂದು ಹೇಳುವುದು. ಆದಿಮಾನವನ ಸಂಸ್ಕೃತಿಗೂ, ಇಪ್ಪತ್ತೊಂದನೆ ಶತಮಾನದ ಸಂಸ್ಕೃತಿಯನ್ನು ಹೋಲಿಸಿ ನೋಡಿದರೆ, ಆದಿಮಾನವ ಹೀಗೆ ಇದ್ದನೆ ಎನ್ನುವ ಸಂಶಯ ಬರುವಷ್ಟು ಬದಲಾವಣೆಯಾಗಿದ್ದು, ಭಾರತೀಯ ಸಂಸ್ಕೃತಿ ಹಲವಾರು ಜಾತಿಯ, ಮತದ, ಭಾಷೆಯ ಸಂಸ್ಕೃತಿಯಾದುದರಿಂದ ಒಂದು ಸಮಾಜದ ಸಂಸ್ಕೃತಿ ಇದೇರೀತಿ ಬೇಕೆನ್ನುವ ಭಾವನೆ ಆ ಸಮಾಜದ ಉನ್ನತಿಗೆ ಧಕ್ಕೆಯಾಗಬಹುದು. ಯಾವುದೇ ಸಮಾಜದಲ್ಲಿ ಖಡಾಖಂಡಿತವಾಗಿ ಇದೇ ರೀತಿ ಇರಬೇಕೆಂದು ಪದ್ಧತಿಗಳನ್ನು ಅಳವಡಿಸಿಕೊಂಡರೂ ಅದು ಅದೇ ರೀತಿ ಮುಂದುವರಿದುಕೊಂಡು ಹೋಗುತ್ತದೆಂದು ಹೇಳಲು ಸಾಧ್ಯವಿಲ್ಲ. ಕಾಲಕ್ರಮೇಣ ಕಾಲಸ್ಥಿತಿಯ ಸಾಮಾಜಿಕ ಸುಧಾರಣೆಯ ಅಥವಾ ಆರ್ಥಿಕ ಅಭಿವೃದ್ಧಿ ಅಥವಾ ಕುಂಠಿತದಿಂದಾಗಿ ಕೆಲವು ಬದಲಾವಣೆಗಳು, ರಾಜಕೀಯ ಪರಿಸ್ಥಿತಿಯಿಂದಾಗಿ ಕೆಲವು ಬದಲಾವಣೆಗಳು ಆಗುತ್ತವೆ. ಉದಾಹರಣೆಗೆ ಹಿಂದೆ ಗೌಡ ಮದುವಣಿಗ ತಾನು ಧರಿಸಿದ ಪೋಷಾಕು ಮದುವೆ ಕಾರ್ಯ ಕಳೆಯುವವವರೆಗೂ ಬದಲಾಯಿಸಬಾರದೆಂಬ ಪದ್ಧತಿ ಇತ್ತು.ಆದರೆ ಈಗಿನ ಯುವಕರು ಕೊಡಗಿನ ಹೊರಗಿನವರು ಆಚರಿಸುವಂತೆ ಆರತಕ್ಷತೆ ಕಾಲಕ್ಕೆ ಪಾಶ್ಚಾತ್ಯ ಉಡುಪಾದ ಕೋಟು ಪ್ಯಾಂಟ್ ಟೈ, ಶೂ ಹಾಕಿ ಆರತಕ್ಷತೆಗೆ ನಿಲ್ಲುತ್ತಾರೆ. ಆರತಕ್ಷತೆ ಮಾಡುವಾಗ ದೀವಿಗೆಯನ್ನು ಉರಿಸುವುದಿಲ್ಲ. ಇದು ಗೌಡರ ಸಂಪ್ರದಾಯಕ್ಕೆ ವಿರೋಧ. ಒಬ್ಬ ವಿದ್ಯಾವಂತ ಅಥವಾ ಹಣವಂತ ಯುವಕ ಆಚರಿಸಿದನೆಂದು ಬೇರೆಯವರೂ ಇದನ್ನು ಹಿಂಬಾಲಿಸುತ್ತಿದ್ದಾರೆ. ಈ ರೀತಿಯ ಬದಲಾವಣೆಯನ್ನು ಯಾರೂ ಕೇಳುತ್ತಿಲ್ಲ. ಜಾತಿಯ ಕಟ್ಟು-ಕಟ್ಟಳೆ ಸಡಿಲವಾಗಿದೆ. ಇದನ್ನೆಲ್ಲಾ ಸಮಾಜದ ಧುರೀಣರು ಯೋಚಿಸಿ, ಅಂತಹ ಆಚರಣೆಯನ್ನು ತಡೆಯಬೇಕು. ಆದರೆ ಆ ಧುರೀಣರ ಮಾತನ್ನು ಕೇಳುವವರ್ಯಾರು ? ಸಮಾಜದಲ್ಲಿ ಒಗ್ಗಟ್ಟಿಲ್ಲ. ಶಿಸ್ತು ಇಲ್ಲ. ಪ್ರತಿಯೊಬ್ಬನೂ ಸಮಾಜದ ಮುಂದಾಳೆಂದು ತಿಳಿದುಕೊಂಡಿದ್ದಾನೆ.ಗೌಡ ಸಮಾಜ ಈಗ ಮುಂದಾಳಿಲ್ಲದ ದಿಕ್ಕಿಲ್ಲದ ಸಮಾಜವಾಗಿದೆ. ಯಾರೂ ಯಾರ ಮಾತನ್ನು ಕೇಳುವ ಪರಿಸ್ಥಿತಿಯಿಲ್ಲ. ಗುರುವಿಲ್ಲದ ಮಠ, ಯಜಮಾನನಿಲ್ಲದ ಮನೆ, ದೇವರಿಲ್ಲದ ಗುಡಿ ಇವು ಮೂರು ಒಂದೇ ಎಂದು ಸರ್ವಜ್ಞ ಹೇಳಿದ್ದು ನಮ್ಮ ಜನಾಂಗಕ್ಕೂ ಅನ್ವಯಿಸುತ್ತದೆ ಎಂದು ನನ್ನ ಭಾವನೆ.

○ ಪ್ರೊ॥ ಪೂಜಾರಿ ಮೊಣ್ಣಪ್ಪ

ಸಂಗಾತಿಯರ ಮಿಲನ

ಓ ನನ್ನ ಸಂಗಾತಿಯೇ, ಕೊಡಗು ಸಂಗಾತಿಯೇ !
ನೀನಾದೆ ನನ್ನ ಬಾಳಿನ ಗೆಳತಿಯು ॥
ತಿಂಗಳಿಗೆ ಎರಡು ಸಲ ಮನೆಯ
ಬಾಗಿಲನು ತಟ್ಟಿ ಒಳಗೆ ಬಂದು
ಕುಳಿತುಕೊಳ್ಳುವುದಕ್ಕಿಂತ ಮುನ್ನ
ನಿನ್ನನ್ನು ನೋಡಿದ ಸಂತಸದಲಿ
ಬೀಗುವ ಈ ನಿನ್ನ ಗೆಳತಿಯರು ॥
ಇನ್ನು ನಿನ್ನನ್ನು ಮುಟ್ಟಿ, ನಿನ್ನ
ಬಾಳಿನ ಒಂದೊಂದು ಪುಟದ
ಕಥೆಯನ್ನು ಕೇಳಿದರೆ, ಈ ಗೆಳತಿಯರ
ಹೃದಯದಲ್ಲಿ ಏನೋ ಒಂದು ಹರುಷ ತುಂಬುತ್ತಿದೆ
ಮತ್ತೆ ಆ ಹರುಷವನ್ನು ತುಂಬಲು
ಈ ಸಂಗಾತಿಯರ ಮಿಲನ ಯಾವಾಗ ಎಂದು
ಕಾದು ಕುಳಿತಿರುವ ಗೆಳತಿಯರು ॥

○ ಬಾರನ ಮಮತಾ ಉಲ್ಲಾಸ್, ಮಡಿಕೇರಿ.

ದಾರಿ ದೀಪ ಮತ್ತು ಅಧ್ಯಯನ

ಪ್ರಿಯ ಓದುಗರೆ,

ನಿಮ್ಮ ನೋವು–ನಲಿವು, ಪ್ರೀತಿ–ವಿಶ್ವಾಸ, ಸುಖ-ದುಃಖಗಳು ಸರಿಯಾದ ರೀತಿಯಲ್ಲಿಯೇ ಸ್ಪಂದನವಾಗುತ್ತಿದೆ. ನಾವೀಗ ಗೌಡ ಜನಾಂಗದ ಪ್ರಭಾವಿ ವ್ಯಕ್ತಿಗಳ ಸಂದರ್ಶನ, ವ್ಯಕ್ತಿ ಪರಿಚಯ, ಸಂಸ್ಕೃತಿಯ ಪರಿಚಯ, ಪದ್ಧತಿಗಳು, ಆಚಾರ–ವಿಚಾರಗಳು, ಪ್ರತಿಭಾ ಯುವ ಪರಿಚಯ, ಚಿಕ್ಕ ಕಥೆಗಳು, ಕವನಗಳು, ಮನೆಯ ಚರಿತ್ರೆಗಳು, ದೇವ-ದೈವದ ಚರಿತ್ರೆಗಳು, ಕಾಲಕಂಡವರ ಸ್ಮರಣೆ, ಟೀಕೆ–ಟಿಪ್ಪಣಿ, ನಿಮ್ಮ ಪತ್ರಗಳು, ಚರಿತ್ರೆಗಳು, ಗತಕಾಲದ ವೈಭವಗಳು, ನಗೆಹನಿ, ಒಗಟು, ಚುಟುಕುಗಳು, ಹಾಸ್ಯ ಲೇಖನ, ಪ್ರಕಟಣೆ, ಜಾಹೀರಾತು ಹಾಗೂ ಐಕ್ಯತೆಗಾಗಿ ಮುಖ್ಯ ಸುದ್ಧಿಗಳನ್ನು ಪ್ರಸಾರ ಮಾಡುತ್ತಿದ್ದೇವೆ. ಇನ್ನು ಹೆಚ್ಚಿನ ಅಂಕಣಗಳನ್ನು ತೆರೆಯಲು ಯೋಚಿಸಿದ್ದೇವೆ. ಆದರೆ ಆಗುತ್ತಿಲ್ಲ. ಕಾರಣ ಸ್ಥಳಾವಕಾಶ ಮಾತ್ರವಲ್ಲ, ಮುಂದೆ ಪತ್ರಿಕೆ ಸರ್ವ ರೀತಿಯಲ್ಲಿ ಮುಂದುವರಿದಾಗ ಕಲೆ, ಕಾದಂಬರಿ, ಚಿತ್ರಲೋಕ, ಪ್ರಾಣಿ ಪ್ರಪಂಚ, ಜಲಚರ, ಪ್ರಕೃತಿ ವಿಜ್ಞಾನ, ಆರೋಗ್ಯ, ತಾಂತ್ರಿಕತೆ, ಕೃಷಿ ವಿಜ್ಞಾನ, ರಾಜಕೀಯ, ಸಾಮಾಜಿಕ, ಜಾನಪದ, ಜೀವನ ಸಂಗಾತಿ, ಪದಬಂಧ, ಮಕ್ಕಳ ವಿಭಾಗ, ಅಜ್ಜಿ ಕಥೆಗಳು, ಮಕ್ಕಳ ಲೇಖನ, ನೀತಿ ಕಥೆಗಳು, ಹೀಗೆ ಎಲ್ಲದಕ್ಕೂ ಅನುವು ಕೊಡುತ್ತೇವೆ. ಮುಂದೆ ಜನಾಂಗಕ್ಕೆ ಮಾತ್ರವಲ್ಲ, ಪತ್ರಿಕೆ ಇಲ್ಲದ ಇತರ ವರ್ಗದ ಜನರ ಪರಿಚಯವನ್ನು ಕೊಡಗಿನಿಂದ ಹೊರ ಜಗತ್ತಿಗೆ ಸಾರಲು ಪ್ರೋತ್ಸಾಹ ರೀತಿಯಲ್ಲಿ ಸಹಕರಿಸಬೇಕಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಅರೆಭಾಷಿಕ ವಿಭಾಗ ಜನ ಮನ್ನಣೆ ಗಳಿಸುತ್ತಿರುವುದು ನೋಡಿದರೆ ನಮ್ಮ ಜನಾಂಗಕ್ಕಿರುವ ಪ್ರೀತಿ, ಮಮತೆಯನ್ನು ಎತ್ತಿ ತೋರಿಸುತ್ತದೆ.

ಅರೆಭಾಷೆ ಬೆಳೆಯಬೇಕು, ಬೆಳೆಸಬೇಕು ಹಾಗೂ ಸಂಶೋಧನೆ ಅಗತ್ಯವಾಗಿ ಆಗಬೇಕು. ಬಹಳ ಪುರಾತನವಾದ ಭಾಷೆಯಾಗಿ, ಯಾವುದೋ ಒತ್ತಡಕ್ಕೆ ಮಣಿದು, ತುಳಿಯಲ್ಪಟ್ಟು ಮೂಲೆಗುಂಪಾಗಿದೆ ಎನ್ನುವ ಅನುಕಂಪವಿದೆ. ದ್ರಾವಿಡ ಭಾಷೆ ವಿಜ್ಞಾನವನ್ನು ಅವಲೋಕಿಸಿದಾಗ, ಪಂಚ ಗೌಡ ದೇಶಗಳು, ಪಂಚ ಗೌಡ ಭಾಷೆಗಳು, ಮುಂಡಾ, ದ್ರಾವಿಡ, ಆರ್ಯರು, ಗೋಂಡಿ, ಬಡಗ, ಕನ್ನಡ, ಕೊಡಗು ಎನ್ನುವ ಭಾಷಾ ಪದ ಪುಂಜಗಳು ಹಾದು ಹೋಗಿರುವುದರ ಬಗ್ಗೆ ನಮ್ಮ ಯುವ ಪೀಳಿಗೆ ಅಧ್ಯಯನ ವಿಷಯವಾಗಿ ತೆಗೆದುಕೊಳ್ಳಬೇಕು. ಕನ್ನಡ, ಅರೆಭಾಷೆ, ಬಡಗ, ತೋಡ, ದ್ರಾವಿಡ ಎಂಬ ಪಂಚ ಭಾಷೆಗಳ ಉಪ ಭಾಷೆಗಳ ಬಗ್ಗೆ ಸಾಕಷ್ಟು ಅಧ್ಯಯನವಾದಾಗ ಮಾತ್ರವೇ ಹುದುಗಿ ಇತಿಹಾಸವಾಗಿರುವ ಹಲವಾರು ಭಾಷಾ ವಿಷಯಗಳು ಬೆಳಕಿಗೆ ಬರುತ್ತವೆ. ವಿಶೇಷತೆ ಎಂದರೆ, ಬಡಗ ಭಾಷೆಯು ಅರೆಭಾಷೆಗೆ ಹತ್ತಿರದ ನೆಂಟಸ್ತ ಇವೆ. ಬರೆದ ವಿಜ್ಞಾನಿಗಳು ಅರೆಭಾಷೆ ಎನ್ನುವ ಪದ ಬಿಟ್ಟು ಬಡಗ ಎಂದೇ ಹೆಸರಿಸಿದ್ದರೇನೋ ? ಕನ್ನಡ, ಬಡಗ, ಕೊಡವ ಭಾಷೆಗಳು ಆಸುಪಾಸಿನಲ್ಲಿ ಬಾಳಿದವುಗಳು. ಮುಂದೆ ಬರುವ ಜನಗಣತಿಯಲ್ಲಿ ಅರೆಭಾಷಿಕರೆಂದು ಪ್ರತ್ಯೇಕವಾಗಿ ಬರೆಸುವಂತೆ ನಮ್ಮ ಸಮಾಜಗಳು ಪ್ರಯತ್ನಿಸಬೇಕು. ಹಾಗೂ ಈ ನಿಟ್ಟಿನಲ್ಲಿ ಸರ್ಕಾರದ ಗಮನ ಸೆಳೆಯುವ ಪ್ರಯತ್ನ ಆಗಬೇಕು. ನಮ್ಮನ್ನು ನಾವೇ ಗುರುತಿಸಿಕೊಳ್ಳಬೇಕು. ಇನ್ನೊಬ್ಬರು ನಮ್ಮನ್ನು ಗುರ್ತಿಸಲು ಮುಂದೆ ಬಂದಾರೆಯೇ ?

ಕನ್ನಡವನ್ನು ಬಿಟ್ಟು, ಸಂಸ್ಕೃತ, ದ್ರಾವಿಡ ಭಾಷೆಯ ಉಳಿದಲಿಪಿ ಇಲ್ಲದ ಉಪಭಾಷೆಗಳೆಲ್ಲಾ ಅಶುದ್ಧ ಭಾಷೆಗಳೆಂತಲೂ, ಅದನ್ನು ಸ್ನಾನ, ಜಪಾದಿ ಕಾಲಗಳಲ್ಲಿ ಹೇಳಬಾರದೆಂತಲೂ, ಸಂಸ್ಕೃತ ಬಾರದ ಪಕ್ಷದಲ್ಲಿ ಕನ್ನಡ ಭಾಷೆಯನ್ನು ಆಡಬಹುದೆಂದೂ ಜನರ ಮೇಲೆ ಒತ್ತಡ ಹೇರಿದ್ದ ಕಾಲವೊಂದಿತ್ತು [ಕೃಷ್ಣ ಆಚಾರ್ಯರ ಹೊಸ ಕನ್ನಡ, ನುಡಿ ಕನ್ನಡ, ದ್ವಿ.ಮು. ಪು. ಮೊದಲ ಮುದ್ರಣ, ಮದರಾಸು] ಅಂದಿನ ಪರಿಸ್ಥಿತಿಯನ್ನು ಗ್ರಹಿಸಬೇಕಾದದು ಮುಖ್ಯ. ಅಂತು ಅಂತಹ ಭಾಷಾ ತಾರತಮ್ಯಗಳ ಮಧ್ಯೆ ಈ ಭರತ ಖಂಡದಲ್ಲಿ ಭಾಷೆಗಳು ಬಾಳಿ ಉಳಿದಿವೆ. ಮೇಲ್ವರ್ಗದ ಭಾಷಾಪಂಡಿತರ ಪ್ರಭಾವಗಳಿಗೆ ಮಣಿಯದೆ ಈ ಅರೆಭಾಷೆ ಇಂದು ಪಶ್ಚಿಮ ಘಟ್ಟದ ಮೇಲಿನ-ಪ್ರದೇಶಗಳಾದ ಕೊಡಗು, ಕನ್ನಡ ಜಿಲ್ಲೆ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಯಲ್ಲಿ ತನ್ನತನವನ್ನೂ, ತನ್ನ ಸ್ವಂತಿಕೆಯನ್ನೂ ಕಾಪಾಡಿಕೊಂಡು ಬಂದಿದೆ. ಹೊಗಸರು ಗೇಟಿ ಕಟ್ಟಿ, ಮುಂದೆ ನೆಂಗೆ ಇಡುವ ಕ್ರಮವನ್ನು ಮತ್ತು ಜನಾಂಗೀಯ ಸಂಸ್ಕೃತಿಯ ಬಗ್ಗೆ ಅವಲೋಕಿಸಿದಾಗ ಅರೆಭಾಷಿಕ ಬುಡಕಟ್ಟು ಜನಾಂಗ ತನ್ನದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಉಳಿಸಿ, ಪೋಷಿಸಿಕೊಂಡು ಬಂದಿದೆ. ಯಾವುದೇ ಒತ್ತಡಕ್ಕೆ ಮಣಿಯದೆ ನಮ್ಮ ಅರೆಭಾಷೆಯನ್ನು ಉಳಿಸಿಕೊಂಡು ಬಂದಿದ್ದಾರೆ ನಮ್ಮ ಪೂರ್ವಿಕರು. ಇದು ಹೆಮ್ಮೆಯ ವಿಚಾರವಾಗಿ ಚಿಂತನಾರ್ಹವಾಗಿದೆ. ಈ ಅರೆಭಾಷೆಯನ್ನು ಇಂದು ಸುಮಾರು 5 ಲಕ್ಷಕ್ಕಿಂತಲೂ ಹೆಚ್ಚಿನ ಜನ ಮಾತನಾಡುತ್ತಾರೆ ಅನ್ನುವ ವಿಚಾರವನ್ನು 1985 ಮತ್ತು 1996ರ ಕೊಡಗು ಮತ್ತು ದ.ಕ. ಸಮ್ಮೇಳನ, ಸುಳ್ಯದಲ್ಲಿ ಘೋಷಿಸಿದ್ದೆ ಇದಕ್ಕಿರುವ ಆಧಾರ ಸ್ಥಂಭ. ಬಡಗ, ಭಾಷೆಯನ್ನು 1951ರ ಖಾನೆಸುಮಾರು ಪ್ರಕಾರ 67,286 ಜನ ದಾಖಲಾಗಿದ್ದರೆ, ತೋಡ ಜನಾಂಗದ 655 ಮಂದಿಯನ್ನು ದಾಖಲಿಸಿದ್ದರೆ, ಅರೆಭಾಷೆಯನ್ನು ಸುಮಾರು 5 ಲಕ್ಷಕ್ಕೂ ಹೆಚ್ಚು ಮಾತನಾಡುತ್ತಿದ್ದರು ಸಹ ಯಾಕೆ ಇದನ್ನು ಜನಗಣತಿ ಪಟ್ಟಿಯಲ್ಲಿ ಪ್ರತ್ಯೇಕವಾಗಿ ಕಾಣಿಸಲಿಲ್ಲ ? ಇದರ ಚಿಂತನೆ ಇಂದು ಅಗತ್ಯವಾಗಿ ಆಗಬೇಕು.

ದಕ್ಷಿಣ ಡ್ರಾವಿಡ ಭಾಷಾ ಶಾಖಾ – ಪರಿಚಯ

ತಮಿಳು ಮಲೆಯಾಳ ವರ್ಗ	ಕನ್ನಡ ವರ್ಗ	ತುಳು ವರ್ಗ	ತೆಲುಗು ವರ್ಗ
ತಮಿಳು ಮಲೆಯಾಳ ತೋಡ ಕೋತ	ಕನ್ನಡ ಬಡಗ ಕೊಡವ (ಅರೆಭಾಷೆ)	ತುಳು	ತೆಲುಗು ಸವರ

	1891	1911	1951	1961
ತೆಲುಗು	1,98,85,137	2,35,42,859	3,29,99.916	3,76,68,132
ತಮಿಳು	1,52,29,759	1,18,97,409	2,65,46,764	3,05,32,611
ಕನ್ನಡ	97,51,885	1,05,25,769	1,74,80,768	1,74,15,827
ಮಲೆಯಾಳ	54,28,250	67,92,277	1,33,80,109	1,70,15,584
ತುಳು	4,91,728	5,31,498	7,87,624	9,34,849
ಕೊಡವ	37,218	42,881	68,799	78,202
ತೋಡ	—	730	879	765
ಕೋತ	—	1,280 [1931ರ]	1,136	862
ಬಡಗ	—		67,286	—
ಅರೆಭಾಷೆ [ಅಂದಾಜಿನ ಪ್ರಕಾರ 1985–1996ರ ಸುಮಾರಿಗೆ]		—	—	5,00,000

(ಸಮಾಜದ ಯುವ ಪೀಳಿಗೆಯು ಅರೆಭಾಷೆಯ ಬಗ್ಗೆ ಅಧ್ಯಯನ ನಡೆಸಲು ಮುಂದೆ ಬರುವುದು, ಅಲ್ಲದೆ ಹತ್ತು ಕುಟುಂಬ, ಹದಿನೆಂಟು ಗೋತ್ರದ ಬಗ್ಗೆಯು ಸಹ ಅಧ್ಯಯನವಾಗಿ ಮುಂಬರುವ ಪೀಳಿಗೆಗೆ ದಾರಿದೀಪವಾಗಬೇಕೆಂಬುದೇ ಲೇಖಕರ ಅಭಿಪ್ರಾಯವಾಗಿದೆ.

○ ಪಟ್ಟಡ ಪ್ರಭಾಕರ್, ಮೈಸೂರು.

ನಗೆಹನಿ

ಉಪಾಧ್ಯಾಯಿನಿ : ಆರೋಗ್ಯಕ್ಕೆ ಒಳ್ಳೆಯ ಮತ್ತು ಕೆಟ್ಟ ಎಣ್ಣೆ ಯಾವುದು ?

ವಿದ್ಯಾರ್ಥಿ : ನಮ್ಮಮ್ಮ ಅಡಿಗೆಗೆ ಉಪಯೋಗಿಸುವ ಎಣ್ಣೆ ಅತೀ ಉತ್ತಮವಾದುದು. ರಾತ್ರಿ ನಮ್ಮಪ್ಪ ಹಾಕಿ ಬರುವ ಎಣ್ಣೆ ಕೆಟ್ಟದು. ○

ವಿಕಾಸ್ ! ನನ್ನ ಹೆಂಡತಿ ಬಹಳ ಬುದ್ಧಿವಂತೆ. ತನ್ನ ಬ್ಲೌಸಿನ ಬಟ್ಟೆಯಲ್ಲಿ ನನಗೆ ಟೈಗೆ ಆಗುವಷ್ಟು ಬಟ್ಟೆ ಉಳಿಸಿಬಿಡ್ತಾಳೆ.

ನಿಖಿಲ್ : ನನ್ನ ಹೆಂಡತಿ ಇನ್ನೂ ಬುದ್ಧಿವಂತೆ. ಅವಳು ನನ್ನ ಟೈನಿಂದ ಬ್ಲೌಸ್ ಹೊಲಿಸ್ಕೊತ್ತಾಳೆ. ○

ಸಂಜಿತ್ : ನಿನ್ಯಾಕೆ ಜೈಲಿಗೆ ಹೋದೆ ?

ಮುಕುಲ್ : ಸರ್ಕಾರಕ್ಕೆ ನನ್ನ ಮೇಲೆ ಹೊಟ್ಟೆ ಕಿಚ್ಚು. ಅದಕ್ಕೆ ನನ್ನನ್ನು ಜೈಲಿಗೆ ಕಳಿಸಿದರು.

ಸಂಜಿತ್ : ಸರ್ಕಾರದವರಿಗ್ಯಾಕೆ ನಿನ್ನ ಮೇಲೆ ಹೊಟ್ಟೆಕಿಚ್ಚು.

ಮುಕುಲ್ : ಯಾಕೆಂದರೆ ಅವರಿಗಿಂತ ನಾನು ಉತ್ತಮವಾಗಿ ನೂರು ರೂಪಾಯಿ ನೋಟುಗಳನ್ನು ಮುದ್ರಿಸಿದ್ದೆ. ಅದಕ್ಕೆ ಹೊಟ್ಟೆಕಿಚ್ಚಿನಿಂದ ನನ್ನನ್ನು ಒಳಕ್ಕೆ ತಳ್ಳಿದರು.

● ಬೊಳಗಲ್ ಹೇಮಲತ ಶಿವರಾಂ,
ಬೆಂಗಳೂರು.

ಪ್ರತಿಯೊಬ್ಬರು ಸಾಹಿತ್ಯ ಸೇವೆ ಮಾಡಬೇಕು

ದೈನಂದಿನ ಜೀವನದ ಕೆಲವು ಸಮಯವನ್ನು ಕನಿಷ್ಠ ಅರ್ಧ ತಾಸನ್ನಾದರೂ ಸಾಹಿತ್ಯಕ್ಕೆ ಮೀಸಲಿಡಬೇಕು. ನಾವು ಸಾಹಿತ್ಯ ಮನೋಭಾವನೆಯನ್ನು ಹೊಂದಿರಬೇಕು. ಆದರೆ ಹೇಗೆ? ಕುವೆಂಪು, ದ. ರಾ. ಬೇಂದ್ರೆ, ಮಾಸ್ತಿ, ಶಿವರಾಂ ಕಾರಂತ್, ಇವರು ಸಾಹಿತ್ಯಕ್ಕೆ ಅಪಾರ ಸೇವೆ ಸಲ್ಲಿಸಿದ್ದಾರೆ. ಅವರ ಸೇವೆ ಅಮರ. ಹಾಗೆಯೇ ಗಾಂಧೀಜಿ, ನೆಹರು ಕೂಡ. ನಾನೇನು ಮಾಡುವುದು? ಕವಿಗಳು, ಲೇಖಕರು ಬರೆಯುತ್ತಾರೆ. ವಿಮರ್ಶಕ ವಿಮರ್ಶಿಸುತ್ತಾನೆ. ಸಂಪಾದಕ ವಿಷಯವನ್ನು ಸಂಪಾದಿಸುತ್ತಾನೆ. ಮುದ್ರಕ ಅದನ್ನು ಮುದ್ರಿಸುತ್ತಾನೆ. ಪುಸ್ತಕ ನೂರು ಕಟ್ಟೆಯಲ್ಲಿ ಅಥವಾ ಅಂಗಡಿಯಲ್ಲಿ ರಾರಾಜಿಸುತ್ತದೆ.

ಪುಸ್ತಕ ಅಂಗಡಿಯಲ್ಲಿ ನಾವು ಬಣ್ಣಬಣ್ಣದ ಪುಸ್ತಕವನ್ನು ನೋಡುತ್ತೇವೆ. ಮುಖಪುಟ ನೋಡುತ್ತೇವೆ. ಪುಸ್ತಕದ ಹೆಸರು ಓದುತ್ತೇವೆ. ಕೊಂಡುಕೊಳ್ಳುವ, ಕೊಂಡು ಓದುವ ಗೋಜಿಗೆ ಹೋಗುವುದಿಲ್ಲ. ಏಕೆ? ಹಾಗೆ ಇಂದು "ಕೊಡಗು ○ ಸಂಗಾತಿ" ನಮ್ಮ ವಿಳಾಸವನ್ನು ಹುಡುಕಿಕೊಂಡು ಮನೆಗೆ ಬಂದಾಗ ಕೆಲ ಮಂದಿ ಅದನ್ನು ತಿರಸ್ಕರಿಸುತ್ತಾರೆ.! ಕೇವಲ ಹಾಳೆ ತಿರುಗಿಸಿ ನೋಡುತ್ತಾರೆ ಮೂಲೆಗೆ ಎಸೆಯುತ್ತಾರೆ. ಕೊಡಗು○ಸಂಗಾತಿ ಮಾತ್ರವಲ್ಲ, ಬಹಳಷ್ಟು ಪುಸ್ತಕಗಳನ್ನು ಕೂಡ. ವಿಷಯದ ಶಿರ್ಷಿಕೆಯನ್ನು ಓದುತ್ತಾರೆ, ಚಿತ್ರವನ್ನು ನೋಡುತ್ತಾರೆ ಅಷ್ಟೇ. ವಿಷಯವನ್ನು ಓದುವುದಿಲ್ಲ. ಅಕ್ಷರ ಜ್ಞಾನವಿಲ್ಲವೆಂದಲ್ಲ, ಓದುವ ಕೌಶಲ್ಯವನ್ನು ರೂಢಿಸಿಕೊಂಡಿಲ್ಲ ಎಂದರೆ ಪ್ರಾಯಶಃ ತಪ್ಪಾಗಲಿಕ್ಕಿಲ್ಲ.

ಓದು ಬರಹ ಒಂದು ಕೌಶಲ್ಯ. ಅದು ತನ್ನಿಂದ ತಾನೇ ಬರುವುದಿಲ್ಲ. ಅದನ್ನು ನಾವು ರೂಢಿಸಿಕೊಳ್ಳಬೇಕು. ಹಾಗೆಯೇ ಅದನ್ನು ಅಭಿವೃದ್ಧಿ ಪಡಿಸಿಕೊಳ್ಳಬೇಕು. ಓದಿನಿಂದ ಜ್ಞಾನ ಸಂಪಾದನೆಯಾಗುತ್ತದೆ. ಓದು ಮೆದುಳಿಗೆ ನೀಡುವ ವ್ಯಾಯಾಮ ಭಾರವಾದ ಮನಸ್ಸು ಹಗುರವಾಗುತ್ತದೆ. 'ಏಕಾಂಗಿಯ ಆಪ್ತ ಮಿತ್ರ ಪುಸ್ತಕ'. ಓದಬೇಕು, ಓದಿದ್ದನ್ನು ಅರ್ಜಿಸಬೇಕು, ಅರ್ಜಿಸಿದನ್ನು ಸ್ಮೃತಿಯಲ್ಲಿಡಬೇಕು, ಸ್ಮೃತಿಯಲ್ಲಿ ಇರಿಸಿದನ್ನು ಸ್ಮರಣೆ ಮಾಡಬೇಕು. ಇದರಿಂದ ಬುದ್ಧಿಯ ಶಕ್ತಿ ಹಾಗೂ ನೆನಪಿನ ಶಕ್ತಿ ವೃದ್ಧಿಸುತ್ತದೆ. ಹೆಚ್ಚು ಹೆಚ್ಚು ಪುಸ್ತಕಗಳನ್ನು ಓದುವುದರಿಂದ ಸಾಮಾನ್ಯ ಜ್ಞಾನ ವೃದ್ಧಿಸುತ್ತದೆ.

ಕವಿಗಳು, ಲೇಖಕರು, ಸಂಪಾದಕರು ಸಾಹಿತ್ಯಕ್ಕೆ ಹಗಲಿರುಳು ಎನ್ನದೆ ತಮ್ಮ ಶ್ರಮವನ್ನು ಸಾಹಿತ್ಯ ಪ್ರಪಂಚಕ್ಕೆ ಧಾನ ಮಾಡುತ್ತಾರೆ. ಹಾಗೆಯೇ ನಾವು ಅಂತಹ ಉತ್ತಮ ಪುಸ್ತಕ, ಲೇಖನಗಳನ್ನು ಓದುವುದರ ಮೂಲಕ ಸಾಹಿತ್ಯ ಲೋಕಕ್ಕೆ ತೃಣ ಶ್ರಮಧಾನವನ್ನಾದರೂ ಪರೋಕ್ಷವಾಗಿ ಮಾಡಿದಂತಾಗುತ್ತದೆ. ಪುಸ್ತಕಕ್ಕೆ ನಾವು ಕೊಡುವ ಹಣ ಅಲ್ಪ, ಆದರೆ ಅದರಿಂದ ಪಡೆಯುವ ಜ್ಞಾನ ಅಪಾರ.

ನಮ್ಮ ಗೌಡರ ಅರೆಭಾಷೆಯನ್ನು, ನಮ್ಮ ಗೌಡ ಸಂಸ್ಕೃತಿಯನ್ನು ಬಿಂಬಿಸುವ 'ಕೊಡಗು ○ ಸಂಗಾತಿ' ಪತ್ರಿಕೆಯು 50ನೇ ಸ್ವಾತಂತ್ರ್ಯದ ಸಂವತ್ಸರದಲ್ಲಿ ಹೊರಬಂದಿದೆ. ಈ ಹಿಂದೆ 2 ಪತ್ರಿಕೆಗಳು ಹುಟ್ಟಿ ಜನ ಬೆಂಬಲವಿಲ್ಲದೆ ನಶಿಸಿ ಹೋದುದನ್ನು ನೋಡಿದರೆ ವಿಷಾದವಾಗುತ್ತದೆ. ಹಾಗೆಯೇ ಈ ಕೊಡಗು ಸಂಗಾತಿ ಎಂಬ ಪತ್ರಿಕೆಯು ಇದೀಗ ವಾರ್ಷಿಕ ಹುಟ್ಟು ಹಬ್ಬವನ್ನು ದಾಟ ಬಂದಿರುವಾಗ ನಾವು ಅದನ್ನು ಪ್ರೋತ್ಸಾಹಿಸಬೇಕು. ಕೊಂಡು ಓದಬೇಕು. ನಮ್ಮ ಅನಿಸಿಕೆಗಳನ್ನು ಪತ್ರಿಕೆ ಮೂಲಕ ತೋಡಿಕೊಳ್ಳಬೇಕು. ಸಾಹಿತ್ಯ ಲೋಕದಲ್ಲಿ ಕೊಡಗು ಸಂಗಾತಿಯನ್ನು ತೇಲಿಸಬೇಕು. ಕೊಡಗು ○ ಸಂಗಾತಿಯು ಪ್ರತಿಯೊಬ್ಬರ ಮನೆಯ ಬಾಗಿಲನ್ನು ತಟ್ಟಿ ಅವರ ಹೃದಯವನ್ನು ಮುಟ್ಟುವ ಪ್ರಯತ್ನ ಪ್ರತಿಯೊಬ್ಬ ಗೌಡ ಅಭಿಮಾನಿಯೂ ಮಾಡಬೇಕು. ಆಗ ಮಾತ್ರ ನಾವು ಅರೆಭಾಷಾ ಸಾಹಿತ್ಯ ಲೋಕಕ್ಕೆ ಮಾಡುವ ಅಳಿಲು ಸೇವೆಯಾದರೂ ಆದೀತೇನೋ.

● **ತೆಕ್ಕಡ ಬಿ. ಕುಮಾರ್**, ಮುತ್ತಾರ್ಮುಡಿ.

ಪ್ರಾರ್ಥನೆ

ಜನುಮ ಕೊಟ್ಟ
ತಂದೆ ನಿನಗೆ
ಕೈಯ್ಯ ಮುಗಿಯುವೆ.

ಸಿದ್ಧಿ–ಬುದ್ಧಿ
ನೀಡಿ ಸಲಹು ಎಂದು
ಬೇಡಿಕೊಳ್ಳುವೆ.

ಶುದ್ಧ ಮನವ
ಕರುಣಿಸೆಂದು
ಬೇಡಿಕೊಳ್ಳುವೆ.

ನನ್ನ ಮನಕೆ
ಹಗಲು ಇರುಳು
ನಿನ್ನ ಸ್ಮರಣೆಯೇ.

ನನ್ನ ಹೃದಯ
ಸದನದಲ್ಲಿ
ಸತತ ನೆಲೆಸುವೆ.

ಸ್ತುತಿಸುತಿರಲಿ
ಎನುತ ನಿನ್ನ
ಪಾದಕ್ಕೆರಗುವೆ.

○ ಕುಯ್ಯಮುಡಿ ಪೂಣೇಶ್, ಸಣ್ಣಪುಲಿಕೋಟು

ವರದಕ್ಷಿಣೆ

ವ – ವಧುವನ್ನು
ರ – ರಕ್ಷಿಸಲು
ದ - ದಕ್ಷಿಣೆ ಪಡೆದು
ಕ್ಷಿ - ಕ್ಷೀಣವಾಗಿ, ಕ್ಷುದ್ರವಾಗಿ
ಣೆ – ನೇಣು ಹಾಕುವುದೇ 'ವರದಕ್ಷಿಣೆ'

○ ಮುಕ್ಕಾಟಿ ಸವಿ ಗೋಪಾಲ, ಹೊಸ್ಕೇರಿ.

ಕಥೆ – ವಿದೇಶಿ ಕನ್ಯೆಯ ಸೇಡು

ನಮ್ಮ ಅಖಂಡ ಭಾರತವನ್ನು ಇಂಗ್ಲೀಷರು ಆಳುತ್ತಿದ್ದ ಕಾಲದಲ್ಲಿ ಅಂದರೆ 20ನೇ ಶತಮಾನ ಆರಂಭದ ಕಾಲವದು. ಕಾಸರಗೋಡು ನಗರದ ಸಮೀಪದ ಒಂದು ಹಳ್ಳಿಯಲ್ಲಿ ಒಂದು ಬ್ರಾಹ್ಮಣ ಕುಟುಂಬ ವಿದ್ದಿತು. ಆ ಕುಟುಂಬದ ಯಜಮಾನನ ಹೆಸರು ವೆಂಕಟೇಶ್ ಎಂದು. ಅವರಿಗೆ ಪತಿವ್ರತೆಯಾದ ಸುಂದರಿ ಎಂಬ ಹೆಸರಿನ ಮಡದಿಯಿದ್ದಳು. ಇವರಿಗೆ ಕ್ರಿ.ಶ. 1920ರಲ್ಲಿ ಒಂದು ಗಂಡು ಮಗು ಜನಿಸಿದನು. ಅವನಿಗೆ ರಾಮಮೂರ್ತಿ ಎಂದು ಹೆಸರಿಟ್ಟರು. ವೆಂಕಟೇಶನು ತನ್ನ ಪುತ್ರನನ್ನು ಸರಿಯಾಗಿ ಪಾಲಿಸಿ, ವಿದ್ಯಾಭ್ಯಾಸಕ್ಕಾಗಿ ಪಾಠಶಾಲೆಗೆ ಸೇರಿಸಿದನು. ಅಂತು ಅವನಿಗೆ ಹೈಸ್ಕೂಲ್ ವಿದ್ಯಾಭ್ಯಾಸ ಕೊಡಿಸಿ, ಮದ್ರಾಸಿಗೆ ಪದವಿ ಶಿಕ್ಷಣಕ್ಕೆ ಕಳುಹಿಸಿದನು. ಆಗ ಸಮೀಪದ ಮಂಗಳೂರಲ್ಲಿ ಪದವಿ ಕಾಲೇಜು ಇರಲಿಲ್ಲ. ಕ್ರಿ.ಶ. 1940ರಲ್ಲಿ ರಾಮಮೂರ್ತಿಯು ಬಿ.ಎ. ಪದವಿ ಪಡೆದು, ತನ್ನೂರಿಗೆ ಹಿಂತಿರುಗಿ ಬಂದನು.

ರಾಮಮೂರ್ತಿಯು ವಿಜ್ಞಾನ ಪಾಠದಲ್ಲಿ ಹೆಚ್ಚು ಅಂಕಗಳನ್ನು ಪಡೆದಿದ್ದು, ಎರಡು ವರ್ಷದ ವಿಶೇಷ ಅಧ್ಯಯನಕ್ಕೆ ಫ್ರಾನ್ಸ್ ದೇಶದ ರಾಜಧಾನಿಯಾದ ಪ್ಯಾರಿಸ್‌ಗೆ ಆ ದೇಶದ ವಿದ್ಯಾರ್ಥಿವೇತನವನ್ನು ಪಡೆದು, ಹಡಗಿನಲ್ಲಿ ಪಯಣಿಸಿ ಹೋದನು.

ರಾಮಮೂರ್ತಿಯು ಫ್ರಾನ್ಸ್‌ನಲ್ಲಿ ತನ್ನ ಎಂ.ಎ. ಪದವಿಯನ್ನು ಹಾಗೂ ಡಾಕ್ಟರೇಟ್ ಪದವಿಗಳನ್ನು ಕಲಿತು ಪ್ರಥಮ ಶ್ರೇಣಿಗಳಲ್ಲಿ ಉತ್ತೀರ್ಣನಾದನು. ಅಲ್ಲಿ ಅವನಿಗೆ ಸಹಪಾಠಿಯಾಗಿ 'ಎಲ್ಲಿಜಬೆತ್' ಎಂಬ ಹೆಸರಿನ ಸುಂದರಿ ತರುಣಿಯ ಸ್ನೇಹ ಲಭಿಸಿತು. ಅವಳು ಆರೋಗ್ಯಕಾಯದ ಚೆಲುವೆಯಾಗಿ ಆಕರ್ಷಕಳಾಗಿ ಕಾಣುತ್ತಿದ್ದಳು. ಅವಳು ಮೂರ್ತಿಯ ಮೇಧಾಶಕ್ತಿಗೆ ಒಲಿದು ತನ್ನ ಗೆಳೆಯನನ್ನಾಗಿಸಿಕೊಂಡು, ಒಂದು ದಿನ ತಾನು ಅವನನ್ನು ವಿವಾಹವಾಗುತ್ತೇನೆಂದು ಹೇಳಿದಳು. ರಾಮಮೂರ್ತಿಯ ಮನಸ್ಸು ಇಕ್ಕಟ್ಟಿನಲ್ಲಿ ಸಿಲುಕಿಕೊಂಡಿತು.



ಎಂ. ಗಂಗಾಧರಗೌಡ

ಅವಿವಾಹಿತನಾದ ಇವನಿಗೆ ಭಾರತ ದೇಶದಿಂದ ಹೊರಟಾಗ ಮಾತಾಪಿತೃಗಳು 'ಪರದೇಶಿಯ ಕನ್ನೆಯರ ಬಲೆಗೆ ಬೀಳದಿರು' ಎಂದು ಹೇಳಿದ ಎಚ್ಚರಿಕೆ ಮಾತು ಇದೀಗ ಯೌವ್ವನದ ಹುರುಪಿನಲ್ಲಿ ಮರೆತು ಹೋಗಿತ್ತು. ಅವನು ಅವಳ ಸ್ನೇಹ ಸಲುಗೆಗಳಿಗೆ ಬಲಿಯಾಗಿ ಅವಳ ದೇಹ ಸುಖವನ್ನು ಕೆಲವು ತಿಂಗಳು ಅನುಭವಿಸಿದನು. ಇನ್ನೆರಡು ತಿಂಗಳಲ್ಲಿ ಅವನು ಸ್ವದೇಶಕ್ಕೆ ಶಿಕ್ಷಣ ಮುಗಿಸಿ ಬರುವವನಾಗಿದ್ದನು.

ಇತ್ತ ಮೂರ್ತಿಯ ತಂದೆ ತಮ್ಮ ನೆರೆಯೂರಿನ ಸ್ವಜಾತಿಯ ತರುಣಿಯೊರ್ವಳನ್ನು ಮದುವೆ ಮಾಡಿಸುವ ಆತುರದಲ್ಲಿದ್ದು, ಅವನ ಆಗಮನವನ್ನೇ ಕಾಯುತ್ತಿದ್ದರು. ಹುಡುಗಿಯ ನಿಶ್ಚಯದ ಮಾತು ಕೊಟ್ಟು ಮಗನಿಗೆ ಕನ್ಯೆಯ ಭಾವಚಿತ್ರವನ್ನು ಕಳುಹಿಸಿ, ಅವನ ಒಪ್ಪಿಗೆಯನ್ನು ಪಡೆದು, ಎರಡು ಪಕ್ಷದೊಳಗೆ ಒಂದು ತಿಂಗಳ ಹಿಂದೆಯೇ ಜರುಗಿತ್ತು.

ಮಗನು ಸ್ವದೇಶಕ್ಕೆ ಹಡಗಿನಲ್ಲಿ ಪ್ರಯಾಣಿಸಿ ಮದ್ರಾಸಿಗೆ ಬಂದನು. ಅವನ ಪ್ರಿಯತಮೆಯಾಗಿದ್ದ 'ಎಲಿಜಬೆತ್' ಕೂಡಾ ಅವನನ್ನು ಹಿಂಬಾಲಿಸಿಯೇ ವಿವಾಹವಾಗಲು ಬಂದಿದ್ದಳು. ದೇವರ ದಯೆಯಿಂದ ಅವಳು ಗರ್ಭವತಿಯಾಗಿರಲಿಲ್ಲ. 'ಹಿರಿಯರು ಒಪ್ಪಿದರೆ ಮಾತ್ರ ವಿವಾಹವಾಗುವುದು' ಎಂದು ಮೂರ್ತಿ ಹೇಳಿದ್ದನು. ಹಿರಿಯರನ್ನು ಒಪ್ಪಿಸಲೆಂದೇ ಅವಳೂ ಸಹ ಮದ್ರಾಸಿಗೆ ಬಂದಿದ್ದಳು. ಮೂರ್ತಿ ತನ್ನನ್ನು ಹಿಂಬಾಲಿಸಿ ಬಂದ ಎಲಿಜಬೆತ್‌ಗೆ ಮದ್ರಾಸಿನಲ್ಲಿ ತಾನು ತಂಗಿದ್ದ ಕೊಠಡಿಯಲ್ಲಿ ಉಪದೇಶಿಸಿದನು: 'ನೀನು ನನ್ನನ್ನು ಮರೆ – ಬೇರೆ ವಿವಾಹವಾಗು' ಎಂದು. ಎಲಿಜಬೆತ್ ತುಂಬಾ ಚಾಣಾಕ್ಷ ಹುಡುಗಿ. ತನ್ನ ದೇಹಸುಖವನ್ನು ಹಲವು ಕಾಲ ಅನುಭವಿಸಿ, ಅವಿವಾಹಿತನೆಂದು ನಂಬಿಸಿದ ಮೋಸಗಾರನಿಗೆ ತಕ್ಕ ಶಿಕ್ಷೆಯನ್ನು ಉಪಾಯದಿಂದಲೇ ಕೊಡಬೇಕೆಂದು ಮನದಲ್ಲಿ ನಿಶ್ಚಯಿಸಿ ಮೂರ್ತಿಯೊಂದಿಗೆ ಹೀಗೆಂದಳು. "ನನ್ನ ಪ್ರೀತಿಯ ಮೂರ್ತಿ, ನಿನ್ನ ಇಚ್ಛೆಗೆ ನಾನು ವಿರೋಧವಾಗುವುದಿಲ್ಲ. ನೀನೆಂದಂತೆ ನಿನ್ನ ಹಿರಿಯರು ನಿಶ್ಚಯಿಸಿದ ಹುಡುಗಿಯೊಂದಿಗೆ ವಿವಾಹವಾಗು. ಆದರೆ ಈ ಒಂದು ದಿನ ರಾತ್ರಿ ನಾವು ಸುಖಿಸಿ ನಿದ್ರಿಸೋಣ. ನಾನು ನಾಳೆಯೇ ಪ್ಯಾರೀಸ್‌ಗೆ ಹೋಗುತ್ತೇನೆ. ನಾವಿಬ್ಬರು ನಾಳೆಯಿಂದ ಪರಸ್ಪರ ಮರೆಯೋಣ ಎಂದಳು. ಆಗ ಮೂರ್ತಿಗೆ ಸಂತೋಷವಾಯಿತು.

ಅಂತೆಯೆ ಅಂದು ರಾತ್ರಿ 'ಗಣೇಶಭವನ' ಎಂಬ ವಸತಿ ಗೃಹದಲ್ಲಿ ಬಾಡಿಗೆ ಕೊಠಡಿ ಮಾಡಿ, ಸವಿ ಭೋಜನವನ್ನು ಅದೇ ಮಠಾರದಲ್ಲಿ ಮಾಡಿದರು. ನಂತರ ಇಬ್ಬರು ರಮ್ಯಾಗಾರದಲ್ಲಿ ಒಂದಾದರು. ವಿವಿಧ ಸುಖವನ್ನು ಅನುಭವಿಸಿ ನಿದ್ರಿಸಿದರು. ನಿದ್ರಿಸುವ ಮೊದಲು ತನ್ನ ಫ್ಲಾಸ್ಕಿನಲ್ಲಿ ತಂದಿದ್ದ ಹಾಲನ್ನು ಒಂದು ಲೋಟದಲ್ಲಿ ಹಾಕಿ ಮೂರ್ತಿಗೆ ಕೊಟ್ಟಳು. ವಿಶ್ವಾಸದಿಂದ ಮೂರ್ತಿಯು ಆ ಹಾಲನ್ನು ಸವಿದನು. ಅವನಿಗೆ ಕೂಡಲೇ ಗಾಢ ನಿದ್ರೆಯು ಆವರಿ

ಸಿತು. ಕಾರಣವೇನೆಂದರೆ, ಆ ಹಾಲಿನ ಲೋಟಕ್ಕೆ ಬೇಗನೆ ನಿದ್ರೆಬರುವ ಮಾತ್ರೆಯ ಪುಡಿಯನ್ನು ಬೆರೆಸಿದ್ದಳು.

ತನಗೆ ಮೋಸ ಮಾಡಿದ್ದಕ್ಕೆ ತಕ್ಕ ಶಾಸ್ತ್ರಿ ಹೇಗೆ ಮಾಡುವುದೆಂದು ಆಲೋಚಿಸಿ, ಅವನ ಎರಡು ಕಿವಿಗಳಿಗೂ ಆ್ಯಸಿಡ್ ದ್ರವವನ್ನು ಹುಯಿದಳು. ಇದರಿಂದಾಗಿ ಅವನ ಕಿವಿಗಳು ಶಕ್ತಿಹೀನವಾಗಿ ಕಿವುಡಾದವು. ಮಾರನೆ ದಿನ ಮುಂಜಾನೆ ತಾನೊಬ್ಬಳೇ ಬೇಗನೆ ಎಚ್ಚೆತ್ತು ತನ್ನ ವಸ್ತುಗಳನ್ನು ಚೀಲಕ್ಕೆತುಂಬಿಸಿ, ಕಾಗದವೊಂದನ್ನು ಬರೆದಿಟ್ಟು, ವಿಮಾನ ನಿಲ್ದಾಣಕ್ಕೆ ಹೋಗಿ ವಿಮಾನದಲ್ಲಿ ಫ್ರಾನ್ಸ್‌ಗೆ ಹೋದಳು.

ಇತ್ತ ಮಾರನೇ ದಿನ ಬೆಳಗ್ಗೆ ಮೂರ್ತಿ ಎದ್ದಾಗ ಕಿವಿಯು ಸ್ವಲ್ಪ ನೋಯುತ್ತಿತ್ತು. ಅವನು ಸ್ನಾನ ಮಾಡಿದನು. ಕಿವಿ ತೊಳೆದಾಗ ನೀರು ಸ್ವಲ್ಪ ವಾಸನೆ ಬಂದಿತು. ಬೆಳಗ್ಗೆ ಹೊಟೇಲ್ ಮಾಣಿ ಬಂದು ಕರೆದಾಗ, ತನಗೆ ಕಿವಿ ಕೇಳಿಸುವುದಿಲ್ಲ. ನನ್ನ ಜೊತೆಗಿದ್ದ ತರುಣಿ ಕಿವಿಗೆ ವಿಷ ಹಾಕಿ ಓಡಿ ಹೋಗಿದ್ದಾಳೆಂದು ಹೇಳಿದನು. ಮಾಣಿಯ ಕೈಯಲ್ಲಿ ಟೀ, ತಿಂಡಿ ತರಿಸಿ ಫಲಹಾರ ಮಾಡಿದನು. ಆಮೇಲೆ ಮದ್ರಾಸಿನ ತನ್ನ ಗೆಳೆಯನೊಬ್ಬನ ಮನೆಗೆ ಹೋಗಿ ತನ್ನ ಸಂಗತಿಯನ್ನೆಲ್ಲಾ ತಿಳಿಸಿದನು. ಮದ್ರಾಸಿನಲ್ಲಿದ್ದ ಗೆಳೆಯ ಲಿಖಿತನು ಮೂರ್ತಿಯನ್ನು ಅವನ ಪೆಟ್ಟಿಗೆ ಹಾಗೂ ಚೀಲಗಳೊಂದಿಗೆ ಕಾಸರಗೋಡಿಗೆ ರೈಲಿನಲ್ಲಿ ಕರೆತಂದನು. ಅವನನ್ನು ಮನೆಗೆ ಮುಟ್ಟಿಸಿ ಮನೆಯವರಿಗೆಲ್ಲಾ ವಿಷಯ ತಿಳಿಸಿದನು. ಅವರೆಲ್ಲಾ ಮಗನ ಈ ಸ್ಥಿತಿಯನ್ನು ಕಂಡು ದುಃಖಿತರಾದರು. ಈ ಹಿಂದೆ ನಿಶ್ಚಯಿಸಿದ್ದ ಸ್ವಜಾತಿಯ ಕನ್ಯೆ ಕುಸುಮಳೊಂದಿಗೆ ಮೂರ್ತಿಯ ವಿವಾಹವು ಕೆಲವೇ ದಿನಗಳಲ್ಲಿ ನಡೆದು ಹೋಯಿತು. ಕುಸುಮಳು ನನ್ನ ಅದೃಷ್ಟವೇ ಇಷ್ಟು ಎಂದು ಮೂರ್ತಿಯನ್ನು ಸಂತೋಷದಿಂದಲೇ ವಿವಾಹವಾಗಿ, ಅವನಿಗೆ ನೆರವಾದಳು. ಅವನ ಮಾತಾಪಿತೃಗಳಿಗೆ ಸಾಕಷ್ಟು ಅಡಿಕೆ ತೋಟ ಮತ್ತು ಬ್ಯಾಂಕಿನಲ್ಲಿ ಹಣವಿದ್ದುದರಿಂದಲೆ ಕುಸುಮ ಈ ವಿವಾಹಕ್ಕೆ ಒಪ್ಪಿದ್ದಳು.

ಕುಸುಮಳು ಹೇಳುವ ಮಾತುಗಳನ್ನು ತುಟಿಯ ಚಲನೆಯಿಂದ ಅಭ್ಯಸಿಕೊಂಡು ಅವನು ಉತ್ತರ ಕೊಡುತಿದ್ದನು. ಆಗಾಧ ಜ್ಞಾನವಿದ್ದುದರಿಂದ, ಅವನಿಗೆ ತನ್ನ ವ್ಯವಹಾರದಲ್ಲಿ ಕಷ್ಟವಾಗುತ್ತಿರಲಿಲ್ಲ. ಕಾರಣ ಹೆಂಡತಿ ಅವನಿಗೆ ಸರ್ವ ಸಹಾಯವನ್ನೀಯುತ್ತಿದ್ದಳು. ಒಂದು ಕಿವಿಯು ಸ್ವಲ್ಪ ಸರಿ ಇದ್ದುದರಿಂದ ಯಂತ್ರದ ಸಹಾಯದಿಂದ ಕೇಳಿಸುವಂತೆ, ಹೆಂಡತಿ ಬೆಂಗಳೂರಿನ ಆಸ್ಪತ್ರೆಗೆ ಗಂಡನನ್ನು ಕರೆದುಕೊಂಡು ಹೋಗಿ ವ್ಯವಸ್ಥೆ ಮಾಡಿದಳು. ಅವಳಿಗೆ ಯೋಗ್ಯ ಎರಡು ಗಂಡು ಮಕ್ಕಳು ಜನಿಸಿದರು. ಆಮೇಲೆ ಅವಳ ಬಾಳು ಸುಖಮಯವಾಯಿತು.

ನೀತಿ : ವಿದೇಶಕ್ಕೆ ವಿದ್ಯಾರ್ಥಿಗಳು ಹೋದರೆ, ವಿವಾಹಿತನೆಂದು ಹೇಳಿ, ಸ್ತ್ರೀಯೊಬ್ಬಳ ಪಟನನ್ನು ಹಿಡಿದುಕೊಳ್ಳತಕ್ಕದ್ದು. ಪರಸ್ತ್ರೀ ಸ್ನೇಹವಾದರೂ, ವಿವಾಹವಾಗುವುದಿಲ್ಲವೆಂದು ಮೊದಲೆ ತಿಳಿಸತಕ್ಕದ್ದು. ವಿವಾಹದ ಭರವಸೆ ಕೊಡದಿರುವುದು. ಅವರ ದೇಹ ಸಂಪರ್ಕ ಮಾಡದಿರುವುದು ಸುರಕ್ಷಿತದ ದಾರಿ. ಇಲ್ಲವಾದರೆ ಏಯ್ಡ್ಸ್ ಕಾಯಿಲೆಗೆ ಆಹ್ವಾನವಿತ್ತಂತೆ ಹತಾಶಳಾದ ಕನ್ಯೆಯ ಶಿಕ್ಷೆಗೆ ಬಲಿ ಬೀಳುವ ಸಾಧ್ಯತೆಯಿದೆ. ವಿವಾಹಿತ ಪುರುಷರ ತಂಟೆಗೆ ವಿದೇಶಿ ಕನ್ಯೆಯರು ಬರುವುದಿಲ್ಲ. ಬಂದರೂ, ದೇಹ ಸುಖ ಪಡೆದರೂ, ವಿವಾಹಕ್ಕಾಗಿ ಹಠ ತೊಡುವುದಿಲ್ಲವೆಂಬುದು ಸತ್ಯದ ವಿಚಾರವಾಗಿದೆ. ಆದುದ್ದರಿಂದ ಪರಸ್ತ್ರೀ ಸಂಪರ್ಕ ತ್ಯಾಜ್ಯ.

○ **ಎಂ. ಗಂಗಾಧರಗೌಡ, ಸುಳ್ಯ**

ಉದ್ಯೋಗ ವಾರ್ತೆ

ಮೈಸೂರಿನ ಕೆ. ಆರ್. ಆಸ್ಪತ್ರೆಯಲ್ಲಿ 98–99ನೇ ಸಾಲಿಗೆ ಸಾಮಾನ್ಯ ಶುಶ್ರೂಷೆ (ಸ್ಟಾಫ್ ನರ್ಸ್) ತರಬೇತಿಗೆ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಅಧಿಸೂಚನೆ ಕ್ರಮಸಂಖ್ಯೆ ಎನ್.ಆರ್.ಸಿ. 2–98–99

ದಿನಾಂಕ : 22–05–1998

ಅರ್ಜಿ ಫಾರಂ ಪಡೆಯಲು ಕೊನೆಯ ದಿನಾಂಕ 27–6–1998

ಭರ್ತಿ ಮಾಡಿದ ಅರ್ಜಿ ಕಛೇರಿಗೆ ನೀಡಲು

ಕೊನೆಯ ದಿನಾಂಕ 30–6–1998

ಅರ್ಜಿ ಫಾರಂ ವಿತರಣೆ ಮಾಡುವ ಸ್ಥಳ : ಕೆ.ಆರ್. ಆಸ್ಪತ್ರೆ ಮೈಸೂರು.

ಸಮಯ : ಬೆಳಗ್ಗೆ 9 ರಿಂದ ಮಧ್ಯಾಹ್ನ 4 ರವರೆಗೆ [ಕಛೇರಿ ವೇಳೆಯಲ್ಲಿ]

ವಯಸ್ಸು : 17 ವರ್ಷ ತುಂಬಿರಬೇಕು.

ವಿದ್ಯಾರ್ಹತೆ : ಪಿ.ಯು.ಸಿ. ಪಾಸಾಗಿರಬೇಕು. ○

ಇದು ನಮಗೆ ಗೊತ್ತೆ ?

ಗಾಂಧೀಜಿಗೆ ಎಷ್ಟು ಜನ ಮಕ್ಕಳು ?

ಗಾಂಧೀಜಿಗೆ ನಾಲ್ಕು ಜನ ಮಕ್ಕಳು.

1 ಹರಿಲಾಲ್ 2 ಮನಿಲಾಲ್ 3 ರಾಮ್‌ದಾಸ್ 4 ದೇವದಾಸ್.

○ ತಡಿಯಪ್ಪನ ಕುಮಾರಜಯ, ಮೈಸೂರು.

ಜಾತಿ ಹುಟ್ಟಿನಿಂದಲೊ ? ಬೆಳೆದಲ್ಲಿಂದಲೊ ?

ಪ್ರಕೃತಿಯಲ್ಲಿ ಪ್ರತಿಯೊಂದು ಜೀವಿ ಹುಟ್ಟುತ್ತದೆ, ಸಾಯುತ್ತದೆ. ಇದಕ್ಕೆಲ್ಲಾ ಪ್ರಕೃತಿ ನಿಯಮವೇ ಕಾರಣವೆಂದು ಪ್ರತಿಯೊಬ್ಬರು ತಿಳಿದ ವಿಷಯವಾಗಿದೆ. ಪ್ರಾಣಿ ಪಕ್ಷಿಗಳು ಹುಟ್ಟುತ್ತಲೇ ಅವರದೆ ಆದ ಭಾಷೆಯಲ್ಲಿ ಒಂದನ್ನೊಂದು ಸಂಪರ್ಕ ಬೆಳೆಸುತ್ತವೆ. ಒಂದು ಜಾತಿಯ ಪ್ರಾಣಿಯ ಭಾಷೆ ಇನ್ನೊಂದು ಜಾತಿಯ ಪ್ರಾಣಿಗೆ ಅರ್ಥವಾಗುವುದಿಲ್ಲ ಎಂದರೆ, ಮನುಷ್ಯ ಜಾತಿಯಲ್ಲಿ ಹಲವಾರು ಭಾಷೆಗಳಿದ್ದ ಹಾಗೆ. ಹಾಗೆಯೇ ಜಾತಿಗಳು ಸಹ. ಪ್ರಾಣಿ–ಪಕ್ಷಿ ಜಾತಿಗಳನ್ನು ನಾವು ಅದೆಷ್ಟು ಬೇಗನೆ ಗುರುತಿಸುತ್ತೇವೆಯೋ, ಅಷ್ಟು ಬೇಗ ನಮ್ಮ ಮನುಷ್ಯ ಜಾತಿಯನ್ನು ಗುರುತಿಸುವುದು ಆಗದ ಕೆಲಸವೆ. ಕೊಡಗಿನವರನ್ನು ಕೊಡಗರೆಂದೂ, ಕರ್ನಾಟಕದವರನ್ನು ಕನ್ನಡಿಗರೆಂದೂ, ಕೇರಳದವರನ್ನು ಮಲೆಯಾಳಿಗಳೆಂದೂ, ತಮಿಳುನಾಡಿನವರನ್ನು ತಮಿಳರೆಂದೂ ಹೀಗೆ ಪ್ರಾದೇಶಿಕತೆಗೆ ತಕ್ಕಂತೆ ಗುರುತಿಸುತ್ತಾರೆ.

ಒಬ್ಬ ಮನುಷ್ಯ ದೂರದ ಪರ ಊರಿನಿಂದ ಬಂದು ನಮ್ಮೂರಿನಲ್ಲಿ ನೆಲೆಸಿದಾಗ ನಾವು ಬೇಗನೆ ಗುರುತಿಸುವುದು ಅವನ ಊರನ್ನು. ಅಮೇಲೆ ಅವನ ಹೇಳಿಕೆಯ ಆಧಾರದ ಮೇಲೆ ಅವನ ಜಾತಿಯನ್ನು ಗುರುತಿಸುತ್ತೇವೆ. ಹಾಗೆಯೇ ಕಾಲಕ್ರಮೇಣ ಅವನ ಹೇಳಿಕೆಯ ಜಾತಿ ಆಧಾರದ ಮೇಲೆ ಅವನಿಗೆ ಆ ಜಾತಿಯ ಹುಡುಗಿಯನ್ನು ನೋಡಿ ವಿವಾಹ ಮಾಡಿದಾಗ ನಂತರ ಬರುವಂತಹ ಅವನ ಪೀಳಿಗೆಗೆ ಅದೇ ಜಾತಿಯಾಗಿ ಮುಂದುವರೆಯುತ್ತದೆ.

ನನ್ನ ಮಿತ್ರ ಯಾವುದೋ ಜಾತಿಯ ತನ್ನ ತಾಯಿಯ ಹೊಟ್ಟೆಯಲ್ಲಿ ಹುಟ್ಟಿ ಚಿಕ್ಕ ವಯಸ್ಸಿನಲ್ಲಿಯೇ ತನ್ನ ತಾಯಿಯನ್ನು ಕಳೆದುಕೊಳ್ಳುತ್ತಾನೆ. ನಂತರದ ದಿನಗಳಲ್ಲಿ ನನ್ನ ಮಿತ್ರನನ್ನು ಉನ್ನತ ಜಾತಿಯ ಜನಾಂಗದವರು ಸಾಕುತ್ತಾರೆ. ನನ್ನ ಮಿತ್ರ ಉನ್ನತ ಜನಾಂಗದ ಸಂಸ್ಕೃತಿಯಡಿಯಲ್ಲಿ ಬೆಳೆದು, ಅವರದೇ ಆದ ಆಚಾರ–ವಿಚಾರ, ಉಡುಗೆ-ತೊಡುಗೆ, ನಡೆ–ನುಡಿ ಹಾಗೂ ಇನ್ನಿತರ ದೈನಂದಿನ ಚಟುವಟಿಕೆಗಳಲ್ಲಿ ತನ್ನನ್ನು ಸಮರ್ಪಿಸಿಕೊಂಡಿರುತ್ತಾನೆ. ಬೆಳೆದು ದೊಡ್ಡವನಾದಾಗ ಅವನಿಗೆ ಅವನನ್ನು ಹೆತ್ತ ತಾಯಿಯ ಆಡುತ್ತಿದ್ದ ಭಾಷೆ, ತಾಯಿಯ ಜಾತಿ, ಆ ಜಾತಿಯ ಸಂಸ್ಕೃತಿ ಗೊತ್ತಿರುವುದೇ ಇಲ್ಲ. ಕಾರಣ ಇವನು ಬೆಳೆದದ್ದು ಬೇರೆ ಜಾತಿಯವರಲ್ಲಿ ಹಾಗೂ ಬೇರೆ ಜಾತಿಯ ಸಂಸ್ಕೃತಿಯಡಿಯಲ್ಲಿ. ಹೀಗೆ ಬೆಳೆದವನಿಗೆ ಉನ್ನತ ಜಾತಿಯ ಹುಡುಗಿಯನ್ನು ಮದುವೆ ಮಾಡಿ, ತಮ್ಮ ಆಸ್ತಿಯಲ್ಲಿ ಭಾಗ ಕೊಟ್ಟು, ಉನ್ನತ ಜಾತಿಯ ಜನಾಂಗದವನಾಗಿ ಸಂಸಾರ ಸಾಗಿಸುತ್ತಿದ್ದಾನೆ.

ಈ ರೀತಿಯಾಗಿ ಯಾವುದೋ ಜಾತಿಯಲ್ಲಿ ಹುಟ್ಟಿ, ಯಾವುದೋ ಜಾತಿಯಲ್ಲಿ ಬೆಳೆದು, ಸಂಸಾರ ಸಾಗಿಸುತ್ತಿರುವ ಈ ವ್ಯಕ್ತಿ ಯಾವ ಜಾತಿಗೆ ಸೇರಿದವನೆಂದು ಸಮಾಜ ಗುರುತಿಸಬೇಕು. ಇಂದಿನ ಈ ಜಾತಿವಾದಿ ಸಮಾಜದಲ್ಲಿ ಈ ನನ್ನ ಮಿತ್ರ ಯಾವ ಜಾತಿ ? ಈ ಜಾತಿಯನ್ನು ಗುರುತಿಸುವುದು ಮನುಷ್ಯನ ಹುಟ್ಟಿನಿಂದಲೊ ? ಅಥವಾ ಬೆಳೆದಲ್ಲಿಂದಲೊ ? ನೀವೆ ನಿರ್ಧರಿಸಿ.

○ ತಡಿಯಪ್ಪನ ಕುಮಾರಜಯ, ಮೈಸೂರು.

ನಾಲಿಗೆ ಮತ್ತು ರುಚಿ

ಮನುಷ್ಯನಿಗೆ ಐದು ಜ್ಞಾನೇಂದ್ರಿಯಗಳಿವೆ. ಅವುಗಳೆಂದರೆ ಕಣ್ಣು, ಮೂಗು, ಕಿವಿ, ಚರ್ಮ ಮತ್ತು ನಾಲಿಗೆ. ಇವುಗಳಲ್ಲಿ ನಾಲಿಗೆ ರುಚಿಯನ್ನು ತಿಳಿಸುತ್ತದೆ. ನಾಲಿಗೆಯ ಮುಂಭಾಗ ಅಗಲ ಕಿರಿದು, ಹಿಂದಿನ ಭಾಗ ಅಗಲ. ಇದು ದೇಹದ ಒಂದು ಮುಖ್ಯ ಸ್ನಾಯು. ಇದರ ಬಣ್ಣ ಕೆಂಪು. ಸೂಕ್ಷ್ಮವಾಗಿ ನೋಡಿದರೆ ನಾಲಿಗೆಯ ಮೇಲ್ಭಾಗದಲ್ಲಿ ಸಣ್ಣ ಸಣ್ಣ ಗುಳ್ಳೆಗಳಂತಹ ಕಣಗಳು ಕಾಣಿಸುತ್ತವೆ. ಇವುಗಳನ್ನು ಟೇಸ್ಟ್ ಬಡ್‌ಗಳೆಂದು ಕರೆಯಲಾಗುವುದು. ಇವು ಕೋಶಗಳಿಂದ ರಚಿತವಾಗಿದೆ. ಇವುಗಳ ಮೇಲ್ತುದಿಯಲ್ಲಿ ಕೂದಲಿನಂತಿರುವ ತಂತುಗಳು ಹೊರಬಂದಿರುತ್ತವೆ.

ಈ ಟೇಸ್ಟ್ ಬಡ್‌ಗಳಲ್ಲಿ ನಾಲ್ಕು ವಿಧ. ಅವು ನಾಲ್ಕು ಮುಖ್ಯ ರುಚಿಗಳನ್ನು ನಮಗೆ ತಿಳಿಸುತ್ತದೆ. ಸಿಹಿ, ಕಹಿ, ಹುಳಿ ಮತ್ತು ಉಪ್ಪು. ನಾಲಗೆಯ ಮುಂಭಾಗ ಸಿಹಿ ಮತ್ತು ಉಪ್ಪಿನ ರುಚಿಯನ್ನೂ, ಹಿಂಭಾಗ ಕಹಿ ಮತ್ತು ನಾಲಿಗೆಯ ತುದಿಗಳು ಹುಳಿಯ ರುಚಿಯನ್ನು ತಿಳಿಸುತ್ತದೆ. ನಾಲಿಗೆಯ ಮಧ್ಯಭಾಗದಲ್ಲಿ ಟೇಸ್ಟ್ ಬಡ್‌ಗಳಿರುವುದಿಲ್ಲ. ಅದು ಯಾವ ರುಚಿಯನ್ನು ತಿಳಿಸುವುದಿಲ್ಲ. ಆಹಾರ ದ್ರವದ ರೂಪದಲ್ಲಿದ್ದರೆ ಮಾತ್ರ ಅದರ ರುಚಿ ಗೊತ್ತಾಗುತ್ತದೆ. ಆಹಾರದ ಸ್ವಲ್ಪ ಭಾಗ ಲಾಲಾರಸದಲ್ಲಿ ಕರಗಿ, ಟೇಸ್ಟ್ ಬಡ್‌ಗಳನ್ನು ಚುರುಕುಗೊಳಿಸುತ್ತದೆ. ಈ ಆಹಾರದಿಂದಾಗುವ ರಾಸಾಯನಿಕ ಕ್ರಿಯೆ ಜ್ಞಾನ ತಂತುಗಳನ್ನು ಪ್ರೇರೇಪಿಸುತ್ತದೆ. ಈ ಪ್ರೇರಣೆ ಮೆದುಳಿನಲ್ಲಿರುವ ಸ್ವಾದ ಕೇಂದ್ರವನ್ನು ತಲಪುತ್ತದೆ. ಆಗಲೇ ನಮಗೆ ರುಚಿಯ ಅನುಭವ ಆಗುವುದು.

ನಾಲಿಗೆಯಲ್ಲದೆ ಇತರ ಇಂದ್ರಿಯಗಳು ಕೂಡಾ ಆಹಾರದ ರುಚಿಯನ್ನು ನಮಗೆ ತಿಳಿಸಲು ಸಹಾಯ ಮಾಡುತ್ತವೆ. ರುಚಿಯೊಡನೆ ಸೇರಿಕೊಂಡಿರುವ ವಾಸನೆ ನಮಗೆ ಮೂಗಿನಿಂದ ತಿಳಿಯುತ್ತದೆ. ಆದ್ದರಿಂದಲೇ ನಮಗೆ ಜ್ವರ ಅಥವಾ ನೆಗಡಿ ಬಂದಾಗ

(15ನೇ ಪುಟ ನೋಡಿ)

ಟೀಕೆ-ಟಿಪ್ಪಣಿ : ಮೈಸೂರಿನಲ್ಲಿ ಗೌಡ ವಿದ್ಯಾ ಸಂಘದ ಕಾರ್ಯ ವೈಖರಿ

ಮನುಷ್ಯನ ಜೀವನದಲ್ಲಿ ವಿದ್ಯೆ ಒಂದು ಮಹತ್ತರ ಪಾತ್ರ ವಹಿಸುತ್ತದೆ. ಪ್ರತಿಯೊಬ್ಬರೂ ವಿದ್ಯೆಯನ್ನು ಬಾಲ್ಯದಿಂದ ಯೌವ್ವನದವರೆಗೆ ಪಡೆಯುತ್ತಾರೆ. ಅಂದರೆ ಯೌವ್ವನಕ್ಕೆ ವಿದ್ಯಾಭ್ಯಾಸ ಮುಗಿಯಿತೆಂದಲ್ಲ. ವಿದ್ಯೆಗೆ ಮುಪ್ಪಿಲ್ಲ. ಮನುಷ್ಯ ತನ್ನ ಜೀವನ ಪರ್ಯಂತ ಒಂದಲ್ಲ ಒಂದು ರೀತಿಯಲ್ಲಿ ವಿದ್ಯೆಯುನ್ನು ಕಲಿಯುತ್ತಿರುತ್ತಾನೆ. ಆದರೆ ಯಾರೊಬ್ಬರಾಗಲೀ ಸಂಪೂರ್ಣ ವಿದ್ಯೆಯನ್ನು ಕಲಿಯಲು ಸಾಧ್ಯವಿಲ್ಲ. ಒಂದು ವೇಳೆ ಕಲಿತರೆ ಅವನು ಪರಮಾತ್ಮನಿಗೆ ಸಮನಾಗುತ್ತಾನೆ.

ವಿಶ್ವದಲ್ಲಿ ಪ್ರತಿಯೊಂದು ಜನಾಂಗಕ್ಕೆ ಅವರವರದ್ದೇ ಆದ ಸಮಾಜಗಳು, ವಿದ್ಯಾ ಸಂಘಗಳು, ವಿದ್ಯಾ ಸಂಸ್ಥೆಗಳು ಇರುವುದು ಸಾಮಾನ್ಯವಾದ ವಿಷಯ. ಈ ಸಂಘ-ಸಂಸ್ಥೆಗಳು ತಮ್ಮ ತಮ್ಮ ಜನಾಂಗದ ಏಳಿಗೆಗೆ ಶ್ರಮಿಸುತ್ತಿರುವುದು ಇತ್ತೀಚಿನ ವರ್ಷಗಳಲ್ಲಿ ಅತೀ ಶೀಘ್ರದಲ್ಲಿ ನಡೆಯುತ್ತಿದೆ. ಆದರೆ ಕೆಲವು ಸಮಾಜಗಳು, ವಿದ್ಯಾಸಂಘಗಳು ಮಾತ್ರ ಜನಾಂಗದ ಬೆಳವಣಿಗೆಯ ಬಗ್ಗೆ ಕಾಳಜಿ ವಹಿಸದೆ ದಿನೇ ದಿನೇ ಕ್ಷೀಣಿಸಿ ಕೊನೆಗೆ ಪರರ ಪಾಲಾಗುವುದನ್ನು ಕಾಣಬಹುದು. ಈ ರೀತಿಯ ಸಮಾಜಗಳು, ವಿದ್ಯಾ ಸಂಘಗಳು ನಮ್ಮ ಅರೆಭಾಷೆ ಜನಾಂಗದಲ್ಲಿ ತಲೆ ಎತ್ತಿ ಈಗ ನಿರ್ವಾಹಕರು ಸರಿ ಇಲ್ಲದೆ ಮೇಲೆ ಹೇಳಿದ ದಾರಿಯನ್ನು ಹಿಡಿದಿರುವುದು ನಮ್ಮ ಕೊಡಗಿನ ಅರೆಭಾಷೆ ಗೌಡರ ದುರಾದೃಷ್ಟ. ಮೈಸೂರಿನಲ್ಲಿರುವ ಕೊಡಗಿನ ಅರೆಭಾಷೆ ಗೌಡರ ವಿದ್ಯಾ ಸಂಘ ಇದಕ್ಕೆ ನಿದರ್ಶನ.

ಸುಮಾರು ವರ್ಷಗಳಿಂದ ಮೈಸೂರಿನಲ್ಲಿ ಸ್ಥಾಪಿಸಲಾದ ಕೊಡಗು ಗೌಡ ವಿದ್ಯಾಸಂಘ ಈಗ ಮೇಲೆ ಹೇಳಿದ ದಾರಿಯನ್ನು ಸಂಪೂರ್ಣವಾಗಿ ತನ್ನದಾಗಿಸಿಕೊಂಡಿದೆ. ಗೌಡ ವಿದ್ಯಾರ್ಥಿಗಳಿಗೆ ಮಾತ್ರ ಮೀಸಲಿಡಬೇಕಾದ ನಮ್ಮ ವಿದ್ಯಾಸಂಘ ಈಗ "ಓದುವ ಮಕ್ಕಳಿಗೆ ವಿದ್ಯಾಸಂಘ" ಎಂಬ ಹೆಸರನ್ನು ಹತ್ತಿರದ ದಿನಗಳಲ್ಲಿ ಇಡಲು ಉದ್ದೇಶಿಸಿದೆ ಎಂದು ನೋಡಿದ ಪ್ರತಿಯೊಬ್ಬ ನಮ್ಮ ಜನಾಂಗದವರಿಗೆ ಅನಿಸುವುದರಲ್ಲಿ ಸಂಶಯವಿಲ್ಲ. ಇಲ್ಲಿ ದೇಶದ ಮೂಲೆ ಮೂಲೆಗಳಿಂದ ಬಂದ ಕುಲಗೋತ್ರ ಗೊತ್ತಿಲ್ಲದವನಿಗೆ ವಸತಿ ನಿಲಯವನ್ನು ನೀಡಿ ಗೌಡ ಜನಾಂಗದ ಕಣ್ಣಿಗೆ ಮಣ್ಣೆರೆಚುತ್ತಿರುವುದು ಇನ್ನೂ ಯಾರಿಗೂ ತಿಳಿದಿಲ್ಲ. ಗೌಡ ವಿದ್ಯಾರ್ಥಿಗಳನ್ನು ಸಕಲ ವಸತಿ ಸೌಲಭ್ಯದಿಂದ ವಂಚಿತರಾಗಿ ಮಾಡಿ ಪರ ಊರಿನ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಟ್ಟಿರುವುದರಲ್ಲಿ ಏನು ರಾಜಕೀಯ ನಡೆದಿದೆ ಎಂದು ಭಾವಿಸಬೇಕು ? ನಮ್ಮ ಜನಾಂಗದ ವಿದ್ಯಾರ್ಥಿಗಳು ಸಿಗದೇ ಹೋದರೆ ಕೊಠಡಿಯನ್ನು ಖಾಲಿ ಇರಿಸಿದರೆ ಏನು ತಪ್ಪು ?. ಒಂದು ವೇಳೆ ಖಾಲಿ ಇದ್ದರೆ ಅದರಲ್ಲಿ ನಮ್ಮ ಜನಾಂಗದ ವಿದ್ಯಾರ್ಥಿಗಳಿಗೆ ವಿವಿಧ ರೀತಿಯ ವಿದ್ಯಾಭ್ಯಾಸವನ್ನು ಕೊಡಬಹುದಲ್ಲವೆ ? ಉದಾ : ವೃತ್ತಿಶಿಕ್ಷಣ, ಕಂಪ್ಯೂಟರ್, ಹೊಲಿಗೆ ತರಬೇತಿ, ವಾಚನಾಲಯ, ಪುಸ್ತಕ ಭಂಡಾರ, ವಸ್ತು ಸಂಗ್ರಹಲಯ ಹಾಗೂ ಇನ್ನಿತರ ರೀತಿಯ ಕಲಿಕೆಯನ್ನು ಕಲಿಸಿ ನಮ್ಮ ವಿದ್ಯಾರ್ಥಿಗಳ ಹಾಗೂ ಜನಾಂಗದ ಏಳಿಗೆಗೆ ಶ್ರಮಿಸಬಹುದಲ್ಲವೆ? ಇದು ಯಾಕೆ ನಡೆಯುತ್ತಿಲ್ಲ? ಇದರಲ್ಲಿ ಅಡಗಿರುವ ರಾಜಕೀಯ ಅಥವಾ ಕುಟೀಲ ತಂತ್ರವಾದರೂ ಏನು ?

ಅಲ್ಲದೆ ಮೈಸೂರಿನ ನಮ್ಮ ವಿದ್ಯಾಸಂಘದಲ್ಲಿ ಸ್ಥಳ ಸಾಕಷ್ಟು ವಿಸ್ತಾರವಾಗಿದ್ದು, ಇದು ಸಭೆ ಸಮಾರಂಭಗಳಿಗೆ ಯೋಗ್ಯವಾಗಿದೆ. ಇದನ್ನೂ ಆಡಳಿತ ಮಂಡಳಿಯವರು ಹೊರಗಿನವರಿಗೆ ಬಾಡಿಗೆಗೆ ಕೊಡುವುದಲ್ಲದೆ, ಇದರಿಂದ ಸಾಕಷ್ಟು ಹಣ ಸಂಗ್ರಹವಾಗುತ್ತಿದೆ. ಸಂಗ್ರಹವಾದ ಹಣದಲ್ಲಿ ದಿನನಿತ್ಯದ ಖರ್ಚುಗಳೂ ಇವೆ. ಇದು ಎಲ್ಲವರಿಗೂ ಗೊತ್ತು. ಆದರೆ ಎಷ್ಟೋ ವರ್ಷಗಳಿಂದ ಇದರ ಲೆಕ್ಕ ಪರಿಶೋಧನೆ (ಆಡಿಟ್ ವರದಿ) ಯಾಕೆ ನಡೆದಿಲ್ಲ ? ಇದರ ಒಳಗುಟ್ಟೇನು? ಇದರ ಆಡಳಿತ ಮಂಡಳಿಯಲ್ಲಿಯೇ ಲೆಕ್ಕ ಪರಿಶೋಧಕರು ಇದ್ದಾರೆ. ಅವರು ಬ್ಯಾಂಕ್‌ಗಳು, ಕೈಗಾರಿಕೆಗಳು ಹಾಗೂ ಇನ್ನಿತರ ಬೃಹತ್ ಕಂಪನಿಗಳ ಲೆಕ್ಕ ಪರಿಶೋಧನೆ ನಡೆಸುತ್ತಾರೆ. ಆದರೆ ನಮ್ಮ ಗೌಡ ವಿದ್ಯಾ ಸಂಘದ ಲೆಕ್ಕಪರಿಶೋಧಿಸಲು ಸಾಧ್ಯವಾಗುವುದಿಲ್ಲವೆ ? ಜನಾಂದವರಿಗೆ ಇವರ ಉತ್ತರ ಏನು? ತಮ್ಮ ತಮ್ಮ ಕೆಲಸ ಕಾರ್ಯಗಳು ಸಾಕಷ್ಟು ಇರುವಾಗ ಸಮಾಜದ ಕೆಲಸ ಹೇಗೆ ತಾನೆ ಮಾಡಲು ಸಾಧ್ಯ ? ಹಾಗಿದ್ದರೂ ಮಾಡುತ್ತಾರಲ್ಲ, ಮೆಚ್ಚಬೇಕಾದದ್ದೆ. ತಮ್ಮ ತಮ್ಮ ಮನೆಗಳಿಗೆ, ತೋಟ ತೋಡಿಗೆಗಳಿಗೆ ಪ್ರತಿನಿತ್ಯ ಕೊಡಗಿಗೆ ಹೋಗಿ ಕೆಲಸ ಮುಗಿಸಿ ಮೈಸೂರಿಗೆ ವಾಪಾಸ್ಸಾಗುವವರೂ ಇದ್ದಾರೆ. ಆದರೆ ತಿಂಗಳಿಗೊಮ್ಮೆಯಾದರೂ ವಿದ್ಯಾಸಂಘದಲ್ಲಿ ಸೇರಿ ಚರ್ಚೆ ನಡೆಸಲು ಇವರುಗಳಿಗೆ ಸಮಯವಿಲ್ಲ. ಸಭೆ ಕರೆದರೆ ಹತ್ತು ಮಂದಿಗೂ ಹೆಚ್ಚು ಇರುವ ಡೈರೆಕ್ಟರುಗಳಲ್ಲಿ ಹಾಜರಾಗುವುದೇ ಎರಡು ಅಥವಾ ಮೂರು ಮಂದಿ. ಇಂತಹ ಆಡಳಿತ ಮಂಡಳಿಯವರು ನಮಗೆ ಬೇಕೆ ? ವಿದ್ಯಾಸಂಘದಲ್ಲಿ ಕಟ್ಟಡ ಕಟ್ಟಲು ತಳಪಾಯ ಹಾಕಿ ಎಂಟು ಹತ್ತು ವರ್ಷಗಳು ಕಳೆದು, ಕಬ್ಬಿಣ ತುಕ್ಕು ಹಿಡಿದಿದ್ದರೂ ಇನ್ನೂ ಅದು ಅವರ ಕಣ್ಣಿಗೆ ಬೀಳದೇ ಇರುವುದಕ್ಕೆ ಕಾರಣವೇನು ? ತಮಗೆ ಬೇಕಾಗಿರುವವರನ್ನು ಬೆರಳು ತೋರಿಸಿ ಆಡಳಿತ ಮಂಡಳಿಗೆ ಆರಿಸಿದರೆ ಆಗುವುದು ಹೀಗೆ. ಮನಸ್ಸಿಲ್ಲದವರನ್ನು ಬಲತ್ಕಾರದಿಂದ ಆಡಳಿತ ಮಂಡಳಿಗೆ ನೇಮಿಸಿಕೊಂಡರೆ ಅವರು ಹೇಗೆ ತಾನೆ ದುಡಿಯಲು ಸಾಧ್ಯ. ಈ ವಿದ್ಯಾ ಸಂಘದಲ್ಲಿ ಸದಸ್ಯರಿಂದ ಏಕೆ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯವ

[15ನೇ ಪುಟ ನೋಡಿ] -

ಗೌಡರ ವಿವಾಹ ಪದ್ಧತಿಯ ಶೋಬಾನೆಗಳು

ಎಣ್ಣೆ ಅರಸಿಣ ಹಾಡು : ಶಿವ ಶಿವ ಜಯ ಜಯ ಶ್ರೀಗೌರಿ ಕಾರುಣ್ಯ ಸಾಗರ ಕರುಣವ ಪತಿಯೇ ॥ ಹಸ್ತಿನಿ ಶಂಕಿಣಿ ಪದ್ಮಿನಿ ಮೂವರು ಬಂದು ಹಸೆಮಣೆ ಮೇಲೆ ಅಲಂಕರಿಸಿದರು ಶಿವ ಶಂಕರನ॥ ಶಿವ ಶಿವ ಜಯ ಜಯ ಶ್ರೀಗೌರಿ ಮನುಹಾರ ಕಾರುಣ್ಯ ಸಾಗರ ಕರುಣವ ಪತಿಯೆ॥ ಬೇರೆಡುವ ಡೊಂಕಿನಲಿ ವಾದ್ಯಗಳಿಂದ ಮುರಹರನೊಪ್ಪಿಸಿದರು ಶಿವಶಂಕರನ ॥ಶಿವ॥ ನಾರಿಮರ ಶೋಬಾನದಿಂದ ಮುರಹರನೊಪ್ಪಿ ಶಿವಶಂಕರನ ॥ಶಿವ॥ ಮಂಗಳ ಮೈಮಗೆ ಮಂಗಳ ಮುಡಿಯಾಗೆ ಶಿವಶಂಕರನ ಅಲಂಕರಿಸಿದರು ॥ಶಿವ॥

○ ಕಾಳೆಯಂಡ ಅಪ್ಪಚ್ಚು ತಂಗಮ್ಮ, ಬಿಳಿಗೇರಿ.

ಶಿವ ಶಿವ ಜಯ ಜಯ ಶ್ರೀಗೌರಿ ಮನೋಹರ ಕಾರುಣ್ಯ ಸಾಗರ ಕರುಣಾವ ಪತಿಯೆ। ಮದುವೆಯ ಮಂಟಪಕ್ಕೆ ಕದಳಿಯ ಕಂಬಗಳ ರಕ್ಷಿಸಿ ಪದ್ಮದ ಪಟ್ಟೆಗಳ ಬಿಗಿದಿರಿಸಿ ಅಲಂಕರಿಸಿದರೆ ಮನೋಹರ ಶಂಕರನ ॥ಶಿವ ಶಿವ॥ ಮುತ್ತಿನ ಚಪ್ಪರದ ಮಧ್ಯದಲ್ಲಿ ಮುತ್ತಿನ ಹಸೆ ಬರೆದು ಮುತ್ತಿಟ್ಟು ಕುಳ್ಳಿರಲು ಕರುಪುರದ ವೀಳ್ಯಗಳ ಕೊಟ್ಟು ಅಲಂಕರಿಸಿದರೆ ಮನೋಹರ ಶಂಕರನ ॥ಶಿವ॥ ಭೇರಿ ಕಹಳೆಗಳಿಂದ ಬೋರಿಡುವ ವಾದ್ಯಗಳಿಂದ ನಾರಿಯರ ಶೋಬಾನೆಗಳಿಂದ ಅಲಂಕರಿಸಿದರೆ ಮನೋಹರ ಸಾಗರ ॥ಶಿವ॥ ಮುತ್ತಿನ ಮಂಟಪದಲ್ಲಿ ಚಿನ್ನಾದ ಮುಕ್ಕಾಲು ಮಡಗಿರಿಸಿ ಚಿನ್ನಾದ ಕಟ್ಟಲಿ ಅರಸಿಣ ಎಣ್ಣೆಯ ಕಲಸಿಟ್ಟು ॥ಶಿವ॥ ಹಸ್ತಿನಿ ಪದ್ಮಿನಿ ಶಂಕಿಣಿ ಎಲ್ಲಾರು ಕೂಡ ಅರಸಿಣ ಎಣ್ಣೆಯ ಮಾಡಬನ್ನಿರಿ ॥ಶಿವ॥ ಆಯುಳ್ಳ ಅರಸಿಣ ಚಾಯುಳ್ಳ ಎಣ್ಣೆಯ ಎಣ್ಣೆಗೂ ಅರಸಿಣಕ್ಕೂ ರಜ ಒತ್ತಿ ರಜ ಮುಖಕ್ಕೆ ತೀಡಿದರೆ ॥ಶಿವ॥ ○

[14ನೇ ಪುಟದಿಂದ]

ರನ್ನು ಚುನಾಯಿಸುವುದಿಲ್ಲ ? ಇದರ ಹಿಂದೆಯೇ ಅಡಗಿರುವುದು ಗೌಡ ಜನಾಂಗದವರ ಕಣ್ಣಿಗೆ ಮಣ್ಣೆರೆಚುವ ತಂತ್ರ. ಹೀಗಿರುವಾಗ ಈ ವಿದ್ಯಾ ಸಂಘದಲ್ಲಿ ನಡೆಯುವ ಕೈಲ್‌ಮುಹೂರ್ತ ಹಾಗೂ ಹುತ್ತರಿಗೆ ಹೇಗೆ ತಾನೆ ಜನ ಬಂದು ಸಹಕರಿಸಿಯಾರು? ಮೈಸೂರಿನಲ್ಲಿ ಈ ರೀತಿಯಾಗಿ ವಿದ್ಯಾ ಸಂಘ ನಡೆಯುತ್ತಿರುವುದನ್ನು ಗೌಡ ಜನಾಂಗದವರು ಖಂಡಿಸಿ, ಸಂಘ ಬೆಳೆಯಲು ತಮ್ಮ ತಮ್ಮ ಸಲಹೆ ಸೂಚನೆಗಳನ್ನು ಕೊಡಬೇಕು. ಒಂದು ವೇಳೆ ಆಡಳಿತ ಮಂಡಳಿಯಲ್ಲಿ ನಿಮ್ಮ ಸಂಬಂಧಿಕರು ಹಾಗೂ ನೆಂಟರಿಷ್ಟರು ಇದ್ದರೂ ಅದನ್ನು ನಿಮ್ಮ ಮನೆಗೆ ಸೀಮಿತಗೊಳಿಸಿ, ಸಂಘದ ಏಳಿಗೆಗೆ ಪಾದರಸದಂತೆ ಮಾರ್ಗದರ್ಶಕರಾಗುವಿರೆಂದು ಗೌಡ ಜನಾಂಗದವರಲ್ಲಿ ನನ್ನ ಕಳಕಳಿಯ ಮನವಿಯನ್ನು ಇಟ್ಟಿದ್ದೇನೆ.

● ಎಂ. ಕೆ. ರಮೇಶ್, ಮೈಸೂರು.

ಜನರಲ್ ಮ್ಯಾನೇಜರ್ ಆಗಿ ಬಡ್ತಿ

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ (KSFC)ಯಲ್ಲಿ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ದಂಬೆಕೋಡಿ ಸುಬ್ರಾಯ ಆನಂದರವರನ್ನು ಜನರಲ್ ಮ್ಯಾನೇಜರ್ ಹುದ್ದೆಗೆ ಬಡ್ತಿ ನೀಡಿ ಬೆಂಗಳೂರಿನ ಮುಖ್ಯ ಶಾಖೆಗೆ ವರ್ಗಾಯಿಸಿರುವುದು ಹೆಮ್ಮೆಯ ವಿಷಯ.

ಉನ್ನತ ಸರ್ಕಾರಿ ಹುದ್ದೆಯಲ್ಲಿರುವ ಕೆಲವೇ ಅರೆಭಾಷಿಕ ಗೌಡ ಬಾಂಧವರಲ್ಲಿ ನೀವು ಒಬ್ಬರೆಂದು ಗುರುತಿಸಿಕೊಳ್ಳಲು ನಮಗೆ ಹೆಮ್ಮೆಯ ವಿಷಯ. ನಿಮ್ಮ ಶ್ರಮದ ಫಲ ನಿಮಗೆ ದೊರೆತಿರುವುದು ನಮಗೆಲ್ಲಾ ಹರ್ಷ ತಂದಿದೆ. ಕುಲಗುರು ತಿರುಪತಿ ತಿಮ್ಮಪ್ಪನ ಕೃಪಾಕಟಾಕ್ಷೆಯಿಂದ ನಿಮಗೂ ನಿಮ್ಮ ಸಂಸಾರಕ್ಕೂ ಮುಂದೆ ನಿರೀಕ್ಷಿತ ಫಲ ಸಿಗಲೆಂದು ಕೊಡಗು ಸಂಗಾತಿ ಹೃತ್ಪೂರ್ವಕವಾಗಿ ಹಾರೈಸುತ್ತದೆ. ●

ನಾಲಿಗೆ ಮತ್ತು ರುಚಿ

(13ನೇ ಪುಟದಿಂದ)

ಆಹಾರದ ಪೂರ್ಣರುಚಿಯನ್ನು ಸವಿಯಲು ಸಾಧ್ಯವಾಗುವುದಿಲ್ಲ. ಟೇಸ್ಟ್‌ಬಡ್‌ಗಳ ಸಂಖ್ಯೆ ಮಕ್ಕಳಿಗಿಂತ ದೊಡ್ಡವರ ನಾಲಿಗೆಯಲ್ಲಿ ಹೆಚ್ಚಾಗಿರುತ್ತದೆ. ವಯಸ್ಕನೊಬ್ಬನಿಗೆ 3000 ಟೇಸ್ಟ್‌ಬಡ್‌ಗಳಿರುತ್ತವೆ. ಮುದುಕರಾಗುತ್ತಿದ್ದಂತೆ ಅವುಗಳ ಸತ್ವ ಕಡಿಮೆಯಾಗುತ್ತಾ ಬರುತ್ತವೆ. ಕೊನೆಯಲ್ಲಿ ಅವು ಹೆಚ್ಚು ಕಡಿಮೆ ನಿಷ್ಕ್ರಿಯವಾಗುತ್ತವೆ. 70 ವರ್ಷ ವಯಸ್ಸಿನ ವ್ಯಕ್ತಿಯೊಬ್ಬರಲ್ಲಿ ಟೇಸ್ಟ್ ಬಡ್‌ಗಳ ಸಂಖ್ಯೆ ಕೇವಲ 400ಕ್ಕೆ ಇಳಿಯುತ್ತದೆ.

ಮಲಬದ್ಧತೆ ಅಥವಾ ಅಜೀರ್ಣ ಆದಾಗ ನಾಲಿಗೆಯ ಮೇಲೆ ಅಶುದ್ಧತೆ ಕಂಡುಬರುತ್ತದೆ. ಅದು ಆಹಾರದ ಕಣಗಳು ಟೇಸ್ಟ್ ಬಡ್‌ಗಳನ್ನು ಸೇರಲು ಅಡಚಣೆಯನ್ನುಂಟುಮಾಡುತ್ತದೆ. ಜ್ವರ ಮತ್ತು ಅತಿ ಬಿಸಿಯಾದ ಆಹಾರ ಪದಾರ್ಥ ಕೂಡ ಟೇಸ್ಟ್ ಬಡ್‌ಗಳನ್ನು ನಿಶ್ಚೇತಗೊಳಿಸುತ್ತವೆ. ಆಗ ನಮಗೆ ಆಹಾರದ ನಿಜವಾದ ರುಚಿ ಗೊತ್ತಾಗುವುದಿಲ್ಲ. ದ್ರಾಕ್ಷಾರಸ, ಕೊಕೊ ಮತ್ತು ಹಣ್ಣಿನ ರಸ ಇತ್ಯಾದಿ ಪಾನೀಯಗಳನ್ನು ಕುಡಿದಾಗ ನಾಲಿಗೆಗೆ ರುಚಿ ತಿಳಿಯುತ್ತದೆ. ವಾಸನೆ ಮೂಗಿಗೆ ಬಡಿದು "ವಾಸನೆ ನರಗಳ" ಮೂಲಕ ಮಿದುಳನ್ನು ತಲುಪುತ್ತದೆ. ಹೀಗೆ ನಾವು ರುಚಿಯ ಪೂರ್ಣ ಆನಂದವನ್ನನುಭವಿಸುತ್ತೇವೆ.

○ ನೀಶಾ ಪಟ್ಟೆಡ, ಮೈಸೂರು.

ನಿಮ್ಮ ಪತ್ರಗಳು

ಸಲಹೆ

ಸನ್ಮಾನ್ಯ ಮಿತ್ರರೆ,

ನನ್ನ ಸಲಹೆ ಏನೆಂದರೆ, ಬರುವ ವರ್ಷ ಗೌಡಸಂಸ್ಕೃತಿ ವಿಷಯದಲ್ಲಿ ಸಮಾರಂಭ ನಡೆಸುವುದಾದರೆ "ಕೊಡಗು ಸಂಗಾತಿ"ಯ ದ್ವಿತೀಯ ವರ್ಷದ ಆಚರಣೆ, ಅರೆಭಾಷೆಯ ಹಾಗೂ ಗೌಡ ಸಂಸ್ಕೃತಿಯ ಸಮ್ಮೇಳನವನ್ನು ಎಲ್ಲರೂ ಸೇರಿ ಒಂದು ಸ್ಥಳದಲ್ಲಿ ಮಾಡಿ. ಅದರಲ್ಲೂ ಮಡಿಕೇರಿಯಲ್ಲೆ ಮಾಡಬೇಕೆಂದು ನನ್ನ ಸಲಹೆ. ಸಾಧಾರಣ ಏಪ್ರಿಲ್ ತಿಂಗಳ 20ರ ಮೇಲೆ ಮಾಡಿದರೆ ಒಳ್ಳೆಯದು. ಏಕೆಂದರೆ ಶಾಲಾ ಕಾಲೇಜುಗಳಿಗೆ ರಜೆ ಇರುವುದರಿಂದ ಎಲ್ಲರೂ ಭಾಗವಹಿಸುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕಾಗಿ 3-4 ತಿಂಗಳಿಂದಲೇ ಸರಿಯಾದ ಏರ್ಪಾಡಿಗೆ ಪ್ರಯತ್ನಿಸಬೇಕು. ಸಮಾರಂಭ ಒಂದೇ ದಿನ ಆಗಬೇಕೆಂದಿಲ್ಲ. ಮೂರು ದಿನ ಇರಲಿ. ಒಂದನೇ ದಿನ ಯುವಕ ಯುವತಿಯರ ಭಾಷಣ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ಸಾಧ್ಯವಾದರೆ ಆಟೋಟ ಸ್ಪರ್ಧೆ [ಎಲ್ಲವೂ ಗೌಡ ಸಂಸ್ಕೃತಿ, ಗೌಡ ಇತಿಹಾಸ, ಗೌಡರ ಮೇಲ್ಮೆಗಾಗಿ ವಿಷಯಗಳಿರಬೇಕೇ ಹೊರತು ಬೇರೆ ಸಾಮಾನ್ಯ ವಿಷಯ ಬೇಡ.

ಎರಡನೇ ದಿನ ಶೋಬಾನೆ, ನೃತ್ಯ, ವಿವಿಧ ನೃತ್ಯ, ಹಾಡುಗಾರಿಕೆ, ನಾಟಕ ಮುಂತಾದವುಗಳಿರಲಿ.

ಮೂರನೇ ದಿನ ಸಭೆ, ಒಂದೆರಡು ಭಾಷಣಕಾರರು ಚೆನ್ನಾಗಿ ಪ್ರದರ್ಶಿಸಿ ಬಹುಮಾನ ಬಂದ ವಿಷಯವನ್ನು ಸಭೆಗೆ ಪ್ರದರ್ಶಿಸುವುದು, ಬಹುಮಾನ ವಿತರಣೆ ಮುಂತಾದವು.

ಇದಕ್ಕೆ ಗೌಡರಲ್ಲದವರನ್ನು ಕರೆಸಬಾರದು. ಕಾರಣವೇನೆಂದರೆ, ಅವರಿಗೆ ನಮ್ಮ ಸಂಸ್ಕೃತಿಯ ಬಗ್ಗೆ ಗೊತ್ತಿರುವುದಿಲ್ಲ. ಅದೇ ರೀತಿ ಖರ್ಚನ್ನು ಸಹ ಕೊಡಗು ಸಂಗಾತಿ, ಗೌಡ ಸಾಂಸ್ಕೃತಿಕ ಅಕಾಡೆಮಿ, ಮಹಿಳಾ ಸಂಘಟನೆಗಳು ಭರಿಸಬೇಕು. ಇವರೆಲ್ಲರೂ ಇದರಲ್ಲಿ ಭಾಗಿಗಳಾಗಬೇಕು. ಇವರೆಲ್ಲರೂ ಇದರಲ್ಲಿ ಭಾಗಿಗಳಾಗಿ ಪ್ರತೀ ಸಂಸ್ಥೆಯಿಂದಲೂ ಆಯಾಯ ಸಂಸ್ಥೆಯನ್ನು ಪ್ರತಿನಿಧಿಸಬೇಕು. ಇದರಿಂದ ಆಗಾಗ್ಗೆ, ಅಲ್ಲಲ್ಲಿ ಸಮಾರಂಭ ಮಾಡುವುದೂ ತಪ್ಪುತ್ತದೆ. ಪ್ರತಿಯೊಬ್ಬರೂ ಜನರಲ್ಲಿ ಹೋಗಿ ಹಣ ಕೇಳುವುದು ತಪ್ಪುತ್ತದೆ.

○ ಪೂಜಾರಿ ಪೊಣ್ಣಪ್ಪ, ಬೆಂಗಳೂರು.

ಧನ್ಯವಾದ

ಮಾನ್ಯರೆ,

"ಕೊಡಗು ಸಂಗಾತಿ"ಲಿ ಮೂಡಿ ಬರ್ತಾ ಇರ್ವ ಧಾರವಾಹಿ 'ಕರಿ ಚಿನ್ನ' ಭಾರೀ ಲಾಯ್ಕ ಉಟ್ಟು. ಗೌರುಗೆ ಎಲ್ಲಿ ರಾಜನ್ ಮೋಸ ಮಾಡ್ದೆತ ನಂಗೆ ಹೆದ್ರಿಕೆ ಆಗ್ತಾ ಉಟ್ಟು. ಸಂಗಾತಿಲಿ ಇಂಥ ಧಾರವಾಹಿ ಮೂಡಿ ಬರ್ತಾ ಇರ್ದು ನೋಡಿ ನಂಗೆ ಭಾರೀ ಖುಷಿ ಆಗ್ತಾ ಉಟ್ಟು. ಈ ಧಾರವಾಹಿ ಬರೀತಾ ಇರ್ವ ಎಂ.ಇ. ಮಹಮ್ಮದ್‌ನವುಕೆ ಮತ್ತೆ ಸಂಗಾತಿಗೆ ನನ್ನ ಧನ್ಯವಾದಗ.

○ ಅಣ್ಣೆಚ್ಚಿರ ಭಾರತಿ ಸೋಮಣ್ಣ, ಮಕ್ಕಂದೂರು

ಅನಿಸಿಕೆಗಳು

ಪ್ರಿಯ ಓದುಗರೆ,

"ಕೊಡಗು ಸಂಗಾತಿ" ಪತ್ರಿಕೆ ಹುಟ್ಟಿ ಒಂದು ವರ್ಷ ಕಳೆದಿರುವ ಸಂದರ್ಭದಲ್ಲಿ ಕೆಲವರ ಅನಿಸಿಕೆಗಳು ನಮ್ಮ ಕೈ ಸೇರುತ್ತಿದೆ. ಕೆಲವರ ಅನಿಸಿಕೆಯ ಪ್ರಕಾರ ಪತ್ರಿಕೆಯ ಗುಣಮಟ್ಟವನ್ನು ಪ್ರಶ್ನಿಸುತ್ತಿರುವಾಗ, ಕೆಲವರು ಕಥೆ, ಕಾದಂಬರಿ, ಕವನ, ಚುಟುಕು ಹಾಗೂ ಇನ್ನಿತರ ಹತ್ತು ಹಲವಾರು ಪ್ರಶ್ನೆಗಳನ್ನು ನಮ್ಮ ಮುಂದಿಡುತ್ತಿರುವುದು ಸಂತೋಷದ ವಿಷಯ.

ಈ ರೀತಿಯ ಎಲ್ಲಾ ಪ್ರಶ್ನೆಗಳಿಗೆ ಪ್ರತ್ಯೇಕವಾಗಿ ಉತ್ತರಿಸುವುದು ಕಷ್ಟಸಾಧ್ಯವಾದ್ದರಿಂದ ಪ್ರಿಯ ಓದುಗರಲ್ಲಿ 'ಕೊಡಗು ಸಂಗಾತಿ'ಯ ಮನವಿಯೇನೆಂದರೆ, ನೀವು ಪತ್ರಿಕೆಯ ಎಲ್ಲಾ ರಂಗದಲ್ಲಿಯೂ 100ಕ್ಕೆ 100ರಷ್ಟು ಗೌಡ ಜನಾಂಗದವರಿಗೆ ಮೀಸಲಾಗಿಟ್ಟಿದ್ದೇವೆ. ಗೌಡ ಜನಾಂಗದ ಓದುಗರು, ಬರವಣಿಗೆಗಾರರು ಕಳುಹಿಸಿಕೊಡುವಂತಹ ಬರವಣಿಗೆಯನ್ನು ನಾವು ಮುದ್ರಿಸುತ್ತಿದ್ದೇವೆ. ಒಂದು ವೇಳೆ ನಮ್ಮ ಜನಾಂಗದವರ ಬರವಣಿಗೆ ಬಾರದಿದ್ದಲ್ಲಿ ಅವಶ್ಯವಿದ್ದಾಗ ನಾವು ಕೇವಲ ಕೆಲವೇ ವಿಷಯಗಳನ್ನು ಹೊರಗಿನವರಿಂದ ಸ್ವೀಕರಿಸುತ್ತೇವೆ. ಆದುದ್ದರಿಂದ ನಮ್ಮನ್ನು ಪ್ರಶ್ನಿಸುವವರು ದಯವಿಟ್ಟು ನೀವುಗಳೆ ಕಥೆ, ಕಾದಂಬರಿ, ಕವನ ಚುಟುಕು ಇತ್ಯಾದಿ ಕಳುಹಿಸಿ ಸಹಕರಿಸಿದರೆ ನಿಮ್ಮ ಇಚ್ಛೆಯಂತೆ ಪತ್ರಿಕೆ ಬರುವುದರಲ್ಲಿ ಸಂಶಯವಿಲ್ಲ.

ಆದರೆ ಈ ಪತ್ರಿಕೆಯ ಮುಖ್ಯ ಉದ್ದೇಶವೇನೆಂದರೆ, ಗೌಡ ಜನಾಂಗದ ಲೇಖಕರನ್ನು ಹುಟ್ಟು ಹಾಕುವುದು ಮತ್ತು ಜನಾಂಗದ ಐಕ್ಯತೆ. ಇದರ ಜೊತೆಗೆ ನಮ್ಮ ಭಾಷೆ, ಆಚಾರ–ವಿಚಾರ, ಉಡಿಗೆ–ತೊಡಿಗೆ, ನಡೆ-ನುಡಿ, ಕಟ್ಟು–ಕಟ್ಟಳೆ ಹಾಗೂ ನಮ್ಮ ಸಂಪ್ರದಾಯದ ಏಳಿಗೆಯ ಬಗ್ಗೆ ಶ್ರಮಿಸುವುದಾಗಿದೆ. ಇಂದು ಗೌಡ ಜನಾಂಗದಲ್ಲಿ ಒಂದು ರೀತಿಯ ಕ್ರಾಂತಿ ಕಾಣುತ್ತಿರುವುದು ಈ ನಮ್ಮ "ಕೊಡಗು ಸಂಗಾತಿ" ಯಿಂದಲೇ ಎಂದರೆ ಅತಿಶಯೋಕ್ತಿಯಾಗಲಾರದು.

– ಸಂಪಾದಕ

ಕರಿ ಚೆನ್ನ

ಅರೆ ಭಾಷಿಕ ವಿಭಾಗ

ಧಾರವಾಹಿ - 6

ಮೂಲಕಥೆ : ಅಶ್ವಥಿ ಅರವಿಂದ್

ಅರೆಭಾಷೆಗೆ : ಎಂ.ಇ. ಮುಹಮ್ಮದ್

ಕಳೆದ ಸಂಚಿಕೆಯಲ್ಲಿ.........

ಗೌರನ ಮನೆ ಕಿಟಕಿಂದ ನೋಡ್ರೆ ರಂಜನ್‌ನ ಮನೆ ಕ್ವಾಂಬರೆ ಕಂಡದೆ. ಅವಿಬ್ಬರು ಒಟ್ಟಿಗೆ ಸೇರೊಕ್ವಾರೆ ರಾತ್ರಿ ಬೆಂಕಿ ಕಡ್ಡಿ ಗೀರಿ ಗೌರಂಗೆ ರಂಜನ್ ಸಿಗ್ನಲ್ ಕೊಡ್ತಿತ್. ಹಿಂಗೆ ಸೇರ್ದ ಒಂದ್ ದಿನ ಗೌರ ಬಸ್ರಿ ಆದ ವಿಷ್ಯ ತಿಳ್ದ ರಂಜನ್ ಮೊದ್ವೆ ಮಾಡ್ಕಂಡ್ ಬ್ಯಾರೆ ಮನೆ ಮಾಡಿ ಪೋಯಿತೇಳಿ ಅವುಳ್ನ ಸಮಾಧಾನ ಮಾಡ್ವೆ. ಇದೇ ಯೋಚನೆಲಿ ಗೌರ ತಲೆ ಕೆಡ್ಸಿಕಂಡ್ ಕೊನೆಗೆ ತನ್ನ ಅವ್ವನ ಗೋರಿ ಹತ್ರ ಕಷ್ಟನ ತನ್ನಷ್ಟಕೆ ಹೇಳ್ಕಂಡ್ ಮರ್ಸ್ಟದೆ. ಆ ದಿನ ರಾತ್ರಿ ಮಾಮೂಲು ಜಾಗಕ್ಕೆ ಸೇರಿಕೆ ರಂಜನ್‌ನ ಸಿಗ್ನಲ್‌ನೆ ಕಾಯಿತಿತ್ತ್. ಎಷ್ಟ್ ಹೊತ್ತಾದ್ರೂ ಬೇಳ್ಕ್ ಕಾಣದೆ ನಿರಾಸೆ ಆಕಾಕನ ಹಿಂದೆದ ಮೆಲ್ಲೆ ಸದ್ದ್ ಕೇಳಿ ಗೌರ ಹಿಂದೆ ತಿರ್ಗಿದೆ.

ಮುಂದೆ ಓದಿ.......

"ಯಾಕೆ ರಂಜನ್ ಇಷ್ಟ್ ಹೊತ್ತಾದ್ ? ಇನ್ನ್ ನೀನ್ ಬಾಕಿಲೇತ ನಾನ್ ಗ್ಯಾನ ಮಾಡಿದ್ದೆ."

"ನಾನ್ ಬರದೇ ಇರ್ದ್ದು? ಮನೆಗೆ ಬಂದಿದ್ದ ನೆಂಟನೊಬ್ಬನ ಉಪಚಾರ ಮಾಡಿ ಕಳ್ಸಿಕಾಕನ ಇಷ್ಟ್ ಹೊತ್ತಾತ್. ಕಡ್ಡಿ ಬೆಳ್ಕ್ ತೋರ್ಸಿಕೂ ಆತ್ಲೆ, ಸ್ವಾರಿ ಡಾರ್ಲಿಂಗ್".

"ಬ್ಯಾಗ ಹೊರ್ಡ್"

ಇಬ್ಬರೂ ಹೊರ್ಟ್ ಸೊಲ್ಪ ದೂರಲಿ ನಿಲ್ಸಿದ್ದ ರಂಜನ್‌ನ ಜೀಪ್‌ಗೆ ಹತ್ತಿತ್. ಮಂಜಿ ಬೀಳ್ತಿದ್ದ ರೋಡ್‌ಲಿ ಜೀಪ್ ಓಡ್ತಿತ್ತ್. ಕ್ವಾಟ ಗಾಳಿ ಬೀಸ್ವಾಕನ ಗೌರಂಗೆ ಚಳಿ ಹೆಚ್ಚಾತ್.

ಅವ್ಳು ಸೀರೆ ಸೆರ್ಗ್‌ನ ತೆಗ್ದ್ ತಲೆಗೆ ಎಳ್ಕಂಡ್ ರಂಜನ್‌ಗೆ ಒತ್ತಿ ಕುದ್ದತ್. ರಾತ್ರಿ ಕಳ್ದ್ ಬೆಳಿಗ್ಗೆ ಮೂರ್ ಗಂಟೆ ಹೊತ್ತಿಗೆ ಅವು ಹೊಟೇಲಿಗೆ ಎತ್ತಿದೊ. ನಿದ್ದೆಗಣ್ಣ್‌ಲಿದ್ದ ರಿಸಿಪ್ಸನಿಷ್ಟ್ ಗೌರ ಮತ್ತೆ ರಂಜನ್‌ನ ನೋಡಿ ಒಂದ್ ಸಣ್ಣನಗೆ ಬೀರಿ ಸ್ವಾಗತ ಮಾಡ್ತ್

ರಂಜನ್ ಅವಂಗೆ ಕಣ್ಣ್ ಹೊಡ್ದ್ ಕೇ

"ನಂಗೆ ಯಾಕೊ ಹೆದ್ರಿಕೆ ಆದೆ ರಂಜನ್ ನಾವು ಯಾವ್ದೋ ಒಂದು ತಪ್ಪು ದಾರಿಲಿ ಹೋಗ್ತಾ ಇರೋ ಹಂಗೆ ಕಂಡದೆ.

"ಕೆಟ್ಟ ಮಾತ್ ಆಡ್ಬಡ ಗೌರ, ನಾನ್ ಹೇಳ್ದಂಗೆ ಕೇಳ್ರೆ ನಿಂಗೆ ಒಂದ್ ಕೇಡೂ ಬಾಕಿಲೆ. ಒಂದ್ ದೊಡ್ಡ ಹೋಟ್ಲ್‌ಲಿ ನಾನ್ ರೂಂ ಮಾಡಿಯೊಳೆ. ಸೀದ ಅಲ್ಲಿಗೆ ಪೋಯಿ. ರಿಜಿಸ್ಟ್ರ ಮೊದ್ವೆ ಮಾಡ್ಕೋಬುಡೊನಾ?

"ಹ್ಂ..."

ಕೇಳಿಕಣ್ತ್.

"ಆ ಬೊಡ್ಡಿ ಮಜನ ನಗೆ ನೋಡ್ದಾ? ಮಾನ ಮರ್ಯಾದೆ ಇಲ್ಲದಂವ".

ಗೌರ ಮೆಲ್ಲೆ ರಂಜನ್‌ಗೆ ಕೇಳ್ವ್ಸ ಹಂಗೆ ಹೇಳ್ತ್.

"ಹೊಟೇಲ್‌ಲಿ ಗೌರ, ಬರವೆಲ್ಲ ಬಾಡಿಗೆ ಮಾಲೇಂತಲೇ ಅವು ಲೆಕ್ಕ ಹಾಕುವೆ. ನೀನ್ ಅದ್ಕೆಲ್ಲ ತಲೆ ಕೆಡ್ಸಿಕಂಬಡ".

ರಂಜನ್ ಸಮಾಧಾನ ಮಾಡೊವಂಗೆ ಹೇಳ್ತ್. "ನಾವು ಮೊದ್ವೆ ಆಗಿ ಬಾಕಾಕನ ಅಂವ ಹಂಗೆ ನಗಾಡ್ರೆ ನಾನ್ ಅವನ ಸುಮ್ಮನೆ ಬುಡ್ದುಲೆ. ಎರ್ಡ್ ಮಾತ್ ಹೇಳೀ ಹೇಳ್ನೆ".

"ನೀನ್ ಅವನ ವಿಷಯು ಮರ್ತ್‌ಬುಡುಂತ ಹೇಳ್ದಿಲ್ಲ?"

* * *

ರೂಂ ನಂಬರ್ 115ಕ್ಕೆ ಹಾಕಿದ್ದ ಬೀಗನ ರಂಜನ್ ತೆಗ್ತ್.

ತ್ರಿವೇಣಿಂತ ಹೇಳ್ವ ಸ್ಟಾರ್ ಹೊಟೇಲ್‌ನ ಡೀಲಕ್ಸ್ ರೂಂನ ಒಳಗೆ ಗೌರ ಕಾಲ್ ಮಡ್ಗಿತ್.

ಒಳ್ಳೆ ಮೆತ್ತಂಗೆನ ಕಾರ್ಪೆಟ್, ಇಂಟರ್‌ಕಾಂ, ಡಬ್ಬಲ್ ಬೆಡ್, ಮೇಜ್, ಕುರ್ಚಿ, ಸೆಲ್ಪ್, ಫೋನ್, ಫ್ಯಾನ್, ಕಳ್ಳ್ ತುಂಬಿದ್ದ ಬಾಟ್ಲ್, ಐಸ್ ಕೂಲ್ ವಾಟರ್ ಜಗ್ಗ್ ಎಲ್ಲನೂ ಗೌರ ಬಾರೀ ಆಶ್ಚರ್ಯಂದ ನೋಡ್ತ್.

"ರಂಜನ್ ಇಲ್ಲಿ ದೇವಸ್ಥಾನ ಉಟ್ವಾ?"

ಟಾಯ್ಲೆಟ್‌ಂದ ಹೊರಗೆ ಬಂದ ಗೌರ ರಂಜನ್‌ನ ಕೇಳ್ತ್.

"ಬೆಳ್ಕ್ ಹರಿಯಕೆ ಮುಂದೆ ನಿಂಗೆ ದೇವಸ್ಥಾನ..."

ರಿಜಿಸ್ಟ್ರ ಮೊದ್ವೆ ಮಾಡ್ಕಂಡ್ರೂ ನಾವು ಮತ್ತೆ ದೇವಸ್ಥಾನಕ್ಕೆ ಹೋಗಿ ಶಾಸ್ತ್ರೋಕ್ತವಾಗಿ ದೇವರ ಮುಂದೆ ಹೂ ಮಾಲೆ ಹಾಕಣೊಕು ತ ಗೌರ ಹೇಳ್ತ್.

"ಒಳ್ಳೆ ಸಿನೀಮಾ ಡೈಲಾಗ್ ಥರಾ ಹೇಳ್ತಾವಳ. ಅಲಾ, ಇದೆಲ್ಲ ನೀನ್ ಎಲ್ಲಿ ಕಲ್ತದ್"?

ಒಂದ್ ರೌಡಿ ನಗಾಡೊಂಗೆ ನಗಾಡ್ತ ರಂಜನ್ ಹೇಳ್ತ್.

ಈ ಹೊಟೇಲ್‌ನ ಎಲ್ಲಾ ಕೆಲ್ಸದವರ್ನೂ ರಂಜನ್‌ಗೆ ಗೊತ್ತಿತ್ತ್. ಕಳ್ಳ್, ಬ್ರೌನ್ ಷುಗರ್, ಗಾಂಜಾ ಅಷ್ಟೇ ಅಲ್ಲ ಒಳ್ಳೆ

ವಯಸ್ಸಿಗೆ ಬಂದ ಗೂಡೆಗ ಸನ ಅವಂಗೆ ಆ ಹೊಟೇಲ್‌ಲಿ ಸಿಕ್ಕಿತ್ತ್.

115 ನಂಬರ್‍ನ ರೂಂ ಅವಂದೇ ಪರ್ಮನೆಂಟ್ ಥರ ಇತ್ತ್. ಅದರ ಬ್ಯಾರೆ ಯಾರಿಗೂ ಕೊಡಿಕೆ ಬತ್ತ್.
ಮೇಜಿನ ಮೇಲಿದ್ದ ಎರ್‍ಡ್ ಗ್ಲೋಬೆಟ್‌ಗೆ ಅಂವ ರಂ ನ ಹೊಯ್ದ್ ಒಂದಕ್ಕೆ ನೀರ್ ಹಾಕಿ ಗೌರಂಗೆ ಕೊಟ್ಟತ್.

"ತಕಾ ಗೌರ ಒಂದ್ ಸ್ಮಾಲ್ ಪೆಗ್ ಹಾಕಿರೆ ನಿನ್ನ ಚಳಿ ಎಲ್ಲ ಘಟ್ಟ ಹತ್ತಿ ಬುಟ್ಟದೆ."

ಅವನ ಆ ಕೆಟ್ಟ ಅಭ್ಯಾಸ, ವರ್ತನೆ ಎಲ್ಲಾ ನೋಡ್‌ಕಾಕನ ತಾನ್ ಬಯಸಿದ್ದ ಗಾಜಿನ ಅರಮನೆಗೆ ಸಿಡ್ಲ್ ಹೊಡ್ದಂಗಾತ್ ಗೌರಂಗೆ. ಅದರ್‍ನ ಮನ್ಸ್‌ಲಿಸ್ಕಂಡ್ ಮುಖಲಿ ಕಾಣ್ಸದೆ ಅವುಳು ಹೇಳ್ತ್.

"ಛೇ... ನಂಗೆ ಬೇಡ ರಂಜನ್"

"ಸೊಲ್ಪ ಕುಡಿ, ಒಂದೂ ಆದುಲೆ."

"ಪ್ಲೀಸ್ ನಂಗೆ ಬೇಡ"

"ಗೌರ ನನ್ನ ಪ್ರೀತಿ ನಿಂಗೆ ಬೇಕಿದ್ರೆ ನೀನ್ ಇದರ್‍ನ ಕುಡ್ದೇ ಕುಡಿಯೊಕು."

ಅಂವ ಆರ್ಡರ್ ಮಾಡ್ದಂಗೆ ಹೇಳ್ತ್.

"ಹ್ಂ......ತಕಾ"

ಒಂದ್ ಒಳ್ಳ ಮನೆ, ಆ ಮನೆಲಿ ಓಡಾಡೊ ಎರಡ್ ಸಣ್ಣ ಮಕ್ಕ, ಪ್ರೀತಿಲಿ ನೋಡೋ ಗಂಡ, ಒಂದ್ ಒಳ್ಳ ಸುಂದರ ಬಾಳ್, ಇದಿಷ್ಟ ಗೌರ ತನ್ನ ಭವಿಷ್ಯದ ಬಗ್ಗೆ ಕಂಡಿದ್ದ ಕನ್ಸ್. ತಾನ್ ಕಂಡಿದ್ದ ಕನ್ಸ್‌ನ ಬಣ್ಣ ಮಾಸಿ ಹೊಗ್ತಾ ಇದ್ದಂಗೆ ಅವ್ಳಿಗೆ ಅನ್ನಿಸ್ತ್.

"ಒಂದ್ ಎರ್‍ಡ್ ಬೆಟ್ಸ್ ರಂ ಕುಡ್ದರೆ ನಿನ್ನ ಪ್ರಾಣ ಏನೂ ಹೊಕಿಲೆ."

ರಂಜನ್ ಸಿಟ್ಟ್‌ಲೇ ಹೇಳ್ತ್.

ಅನ್ನ ಒತ್ತಾಸೆಗೆ ಅವ್ಳ ಸೊಲ್ಪ ಕುಡ್ತ್

ಕಳ್ಳ್ ತಲೆಗೆ ಹತ್ತಿದಂಗೆ ಗೌರ ತನ್ನನ್ನೆ ಮರ್‍ತ್‌ಬುಟ್ಟತ್. ನಾಚಿಕೆ, ಮಾನ-ಮರ್ಯಾದೆ ಒಂದೂ ಅವಳ್ನ ತಡ್ತ್‌ಲೆ. ಅವುಳ್ನ ತನ್ನ ಇಷ್ಟ ಬಂದಂಗೆ ಅನುಭವಿಸೊ ಇಂಥ ಗಳ್ಗೆ ಎಂದೂ ಸಹ ಸಿಕ್ಕಿತ್ಲೆ.

ಅಂವ ಅಳುಂಬು ತರ ಮೆತ್ತಂಗಿದ್ದ ಗೌರನ ತಬ್ಬಿಕಂಡ್ ಡಿಲಕ್ಸ್ ರೂಂನ ಸ್ಪಂಜಿನ ಹಾಸಿಗೆ ಮೇಲೆ ಹೊರಳಾಡ್ತ್.

ಆದ್ರೆ......

ಅವನ ಆನಂದ, ಖುಷಿ, ನಾಡ್‌ಕೊಲ್ಲಿ ಮಾದಪ್ಪನ ಎದೆಲಿ ಬೆಂಕಿ ಹಾಕಿದಂಗಾತ್. ಮಾದಪ್ಪಂಗೆ ಬೆಳಿಗ್ಗೆ ಎಚ್ಚರಾಗಿ ಬಾಳ ಹೊತ್ತಾದ್ರೂ ಮಗಳ ಬೆಡ್ ಕಾಫಿ ಬಾತ್ಲೆ.

"ಗೌರ..."

ಸದ್ದೇ ಇಲ್ಲೆ. ಕಂಬ್ಳಿನ ಮೈಗೆ ಹೊದ್ದ್‌ಕಂಡ್ ಮಾದಪ್ಪ ಮೆಲ್ಲೆ ಕಟ್ಲ್‌ಂದ ಇಳ್ದ್ ಅಡಿಗೆ ಮನೆಗೆ ಹೋತ್.

ಒಲೆಗೆ ಇನ್ನೂ ಬೆಂಕಿ ಹೊತ್ತಿಸ್ತ್‌ಲೆ.

ಇವ್ಳಿಗೆ ಇಂದ್ ಏನಾತ್! ಯಾಗೋಳು ಕೋಳಿ ಕೂಂಗೊ ಹೊತ್ತಿಗೆ ಏಳ್ತಿತ್ತ್‌ಲ್ಲ, ಅಯ್ಯೋ ವಯಿಸ್ಸಿಗೆ ಬಂದ ಗೂಡೆಲ್ಲ! ಸೊಲ್ಪ ಹೆಚ್ಚಿಗೆ ನಿದ್ದೆ ಮಾಡಿರ್‍ದು, ಇನ್ನೀಗ ಮೂರನ ಕರ್‍ದ್ ಪ್ರಯೋಜನ ಇಲ್ಲೆ. ಅವ್ಳ ರಾತ್ರಿ ಬಾಳ ಹೊತ್ತ್ ಓದಿ ಮಲ್ಗಿದವ್ಳ. ಪಾಪ ಸೊಲ್ಪ ಹೊತ್ತ್ ನಿದ್ದೆ ಮಾಡ್ಲಿ.

ಮಾದಪ್ಪ ಗೌರನ ಕ್ಯಾಂಬರೆಗೆ ಹೋಗ್ದೆ ತನ್ನ ಕಟ್ಲ್ ಮೇಲೆ ಬಂದ್ ಕುದ್ದತ್. ಅಂವ ಬೀಡಿ ಕಟ್ಟಗೆ ತಲೆ ದಿಂಬಡಿಗೆ ಕೈ ಹಾಕಿ ತಡ್ರಿಸಿತ್.

ಅಷ್ಟ್ರಲ್ಲಿ ಅವಂಗೆ ಅಲ್ಲಿ ಒಂದ್ ಕಾಗದ ಸಿಕ್ಕಿತ್. ಅಂವ ಅದರ್‍ನ ಬಿಡ್ಸಿ ಓದಿ ನೋಡ್ಕನ ತಲೆಗೆ ಮರ ಬಿದ್ದಂಗಾತ್.

(ಸಶೇಷ)

ಪೊನ್ನಂಪೇಟೆ ಮಹಿಳಾ ಕೈಗಾರಿಕಾ ತರಬೇತಿ ಸಂಸ್ಥೆಗೆ ಅರ್ಜಿ ಕರ್‍ದ್ದೊಳೊ.

ಪೊನ್ನಂಪೇಟೆ ಮಹಿಳಾ ಕೈಗಾರಿಕಾ ತರಬೇತಿ ಸಂಸ್ಥೆವತಿಂದ 1998-99ನೇ ಸಾಲಿಗೆ ಅನ್ವಯವಾಗುವಂಗೆ ವಿವಿಧ ವೃತ್ತಿ ತರಬೇತಿ ಕೋರ್ಸ್‌ಗಳಿಗೆ ಸೇರಿಕೆ ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಕರ್‍ದ್ದೊಳೊ. ಮೆಕಾನಿಕ್ ಜನರಲ್ ಎಲೆಕ್ಟ್ರಾನಿಕ್ಸ್ ತರಬೇತಿ ಪಡಿಯಕೆ ಅಭ್ಯರ್ಥಿ 10ನೇ ಕ್ಲಾಸ್ ಪಾಸಾಗಿರೊಕು. ಕಂಪ್ಯೂಟರ್ [ಡಿ.ಪಿ.ಸಿ.ಎಸ್.] ತರಬೇತಿ ಪಡಿಯಕೆ ವಿಜ್ಞಾನ ಅಥ್ವಾ ವಾಣಿಜ್ಯ ವಿಷಯಲಿ 2ನೇ ಪಿಯುಸಿಲಿ ಪಾಸಾಗಿರೋಕು.

ಅಭ್ಯರ್ಥಿನ ವಯಸ್ 1998ರ ಆಗಸ್ಟ 1ಕ್ಕೆ 14 ವರ್ಷ ತುಂಬಿದ್ದ್, 25 ವರ್ಷ ದಾಟಕಾಗದ್. ಅಭ್ಯರ್ಥಿ ಭಾರತದ ಪ್ರಜೆಯಾಗಿರೊಕು.

ಮೀಸಲಾತಿ ಆಧಾರದ ಮ್ಯಾಲೆ ತರಬೇತಿಗೆ ಅಭ್ಯರ್ಥಿಗಳ್ನ ಆಯ್ಕೆ ಮಾಡ್ವೆ. ನಿಗಧಿತ ಅರ್ಜಿ ನಮೂನೆ ಮತ್ತೆ ಹೆಚ್ಚಿನ ಮಾಹಿತಿಗೆ ಸಂಸ್ಥೆಯ ಪ್ರಾಚಾರ್ಯರ್‍ರಂದ ಕೇಳಿ ಭರ್ತಿ ಮಾಡ್ದ ಅರ್ಜಿನೊಟ್ಟಗೆ ವಿದ್ಯಾರ್ಹತೆಯ ಅಂಕಪಟ್ಟಿ, ಪ್ರಮಾಣ ಪತ್ರದ ನಕಲು ಮತ್ತೆ ವಾರ್ಷಿಕ ವರಮಾನದ ಪ್ರಮಾಣಪತ್ರದ ಪ್ರತಿಗಳೊಂದಿಗೆ ತಾ|| 8-7-1998ರ ಒಳಗೆ ಪ್ರಾಚಾರ್ಯರು, ಮಹಿಳಾ ಕೈಗಾರಿಕಾ ತರಬೇತಿ ಸಂಸ್ಥೆ, ಪೊನ್ನಂಪೇಟೆ ಇಲ್ಲಿಗೆ ಕಳ್ಸಿಕೆ ಕೋರಿಯೊಳೊ.

ನಗೆಹನಿ

ಪುಟ್ಟು, ಕಿಟ್ಟುನ ಮನೆಗೆ ಅವರ ಆಂಟ ಬಂದ್ ಹಂಗೆ ಮಾತಾಡ್ತ್. ಮಕ್ಕ ಅದೆಂತೊ ಜರ್‍ದ್ದ ತಿಂಬಕೆ ಕಳ್ತಳೊ. ನೀವು ತಿಂದರಿಯರ್‍ನ್ನೆತ ಕೇಳ್ಕನ ಪುಟ್ಟು ಹೇಳ್ತ್, ನಾವು ತಿಂಬಲೆ, ಹಂಗೆ ಬಾಯಿಲ್ಲ ಇಟ್ಕಂಡವೆ.

○ ಪಿ. ಎಲ್. ಪ್ರಸಾದ್, ಕೋಪಟ

ಇಂವ ನನ್ನ ತಮ್ಮ

ಒಂದ್ ದಿನ ನನ್ನ ಅಮ್ಮ ಕುದ್ದ್‌ಕಂಡಿತ್ತ್. ಅಲ್ಲಿಲ್ಲೊ ಆಡಿಕಂಡಿದ್ದ ನನ್ನ ತಮ್ಮ ಓಡಿ ಬಂದ್ ಅಮ್ಮನ ತೊಡೆ ಮ್ಯಾಲೆ ಹತ್ತಿ ಕುದ್ದಕಂಡಿತ್ತ್. ಆಗ ಅಮ್ಮ ಚುಮ್ಮಿ ಬಾಯಿ ಬುಡು, ನಿನ್ನ ಹಲ್ಲ್ ಆಡ್ಪೆತ ನೋಡ್ಲೊ ತೇಳಿ ಬಾಯಿ ಬುಡ್ಸಿತ್. ಬಾಯಿ ಬುಡ್ಸಿ ನೋಡ್ಕನ ಎರಡ್ ಹಲ್ಲ್ ಆಡೊಕಾ? ಅಗ ಅಮ್ಮ ಕಣ್ಣ್‌ನ ಅರ್ಳಿಸಿ ಹೇಳ್ಚೆ, ಇದರ್ನ ಬ್ಯಾಗ ತೆಗೆಯದಿದ್ದರೆ ಇದ ರೊಟ್ಟಿಗೆ ಮತ್ತೆರಡ್ ಕೊಂಬಟೆ ಹಲ್ಲ್ ಬಂದದೆ. ಮತ್ತೆ ನಿನ್ನೊಟ್ಟಿಗೆ ಯಾರೂ ಮಾತಾಡ್ದುಲೆ. ಯಾಕೆಂತೇಳ್ರೆ, ನೀನ್ ನಗಾಡ್ಕನ ಬಾಯಿ ತಂಬಾ ಹಲ್ಲ್ ಕಂಡದೆ ತ ಹೇಳ್ಕನ ಅವಂಗೆ ಅಳ್ಗಿಲ್ ಬಾತ್. ಅಮ್ಮಾ ತೇಳಿ ರಾಗ ಎಳ್ತ್. ನನ್ನ ಹಲ್ಲ್‌ಗೆ ನೂಲು ಕಟ್ಟ್ಲೇಳ್ತ್. ಹಾಂಗೆ ಹಿಂಗೆ ಮಣಿಣಿಮಾಡಿ ಹಲ್ಲ್‌ಗೆ ನೂಲು ಕಟ್ಟಿತ್.

ನೂಲು ಕಟ್ಟಿ ಆದ ಮ್ಯಾಲೆ ಇಂವ ಕೀಳಿಕೆ ಬುಟ್ಟದ್ಯಾತ. ಸುತರಾಂ ಬುಡ್ಕಿಲೆ. ಅಮ್ಮನ ಕೈಗೆ ಹಲ್ಲ್ ಬರೊಪೊತ್ತಿಗೆ ಗಂಟೆ ಏಳಾತ್. ಅಮ್ಮನ ಕೈಲಿ ಹಲ್ಲ್ ನೋಡಿ ಇಂವ ಮರ್ಚ್ಚತ್. ಯಾಕೆಂದರೆ ಬ್ಯಾನೆ ಆಗಿತ್ತಲ್ಲ. ಮೈಸೂರಿಗೆ ಹೋದ ನಮ್ಮ ಪೊಪ್ಪ ಬಾಕನ ಇಂವ ಕಡ್ಡೆ ಹೊಡ್ಡಂಗೆ ಆಡ್ತಿತ್ತ್. ನಮ್ಮ ಅಮ್ಮ ಪೊಪ್ಪಂಗೆ ಹೇಳ್ದೊ, ಇನ್ನೊಂದು ಹಲ್ಲ್‌ನ ನೀನೆ ತೆಗೆಯೋಕುತ. ಈ ಹಲ್ಲ್‌ನ ಎಷ್ಟೊತ್ತಿಗೆ ತೆಗ್ದದ್‌ತ ಪೊಪ್ಪ ಕೇಳ್ಕನ ಅಮ್ಮ ಹೇಳ್ತ್, ಕತ್ತಲೆ ಆಕನತ. "ಅಯ್ಯೊ! ಮಧ್ಯಾಹ್ನದ ಮ್ಯಾಲೆ ಹಲ್ಲ್ ತೆಗ್ಯಕಾಗದ್‌ತ ಹೇಳ್ತ್. ನನ್ನ ತಮ್ಮಂಗೆ ಒಂದ್ ಕಡೆ ಕೊಂಬು ಮೂಡ್ತ್. ಯಾಕೆತೇಳ್ರೆ ಮಾರ್ನೆ ದಿನ ಪೊಪ್ಪ ಬಾಕನ ಗಂಟೆ ನಾಲ್ಕ್ ಆಗಿತ್ತ್. ಸದ್ಯ "ಬದ್ಕಿದೆ ಬಡಜೀವ" ತೇಳಿ ಅಂದ್‌ಅಂವ ಹಾಯಾಗಿತ್ತ್. ಬೆಳಿಗ್ಗೆ ಚುಮ್ಮಿ ಎದ್ದೇಳ್, ಹಲ್ಲಾಡ್ಸ್‌ತೇಳಿ ನಮ್ಮ ಪೊಪ್ಪನ ಉದಯರಾಗ ಸುರಾತ್. ಆದರೆ ಇಂವ ಎದ್ದದೇಂತ? ಪೊಪ್ಪ ಹಾಸಿಗೆ ಹತ್ರ ಹೋಗಿ, ನೋಡು ಚುಮ್ಮಿ ನಿನ್ನ ಹಲ್ಲ್ ಗ್ಯಾರೆಂಟೆ ಕೊಂಬಟೆ ಆದೆ. ಎದ್ದ್ ಹಲ್ಲ್ ಕೀಳ್‌ತ ದ್ವಾಗಣೆ ಎಳ್ತ್. ನಂಗೆ ಎಲ್ಲಿತ್ತೊ ಸಿಟ್ಟ್, ಯಾಕೆಂತೇಳ್ರೆ ನನ್ನ ಹಲ್ಲ್ ಕೀಳ್ಕನ ನಂಗೂ ಹಾಂಗೆ ಬ್ಯಾನೆ ಆಗ್ತಿತ್ತ್. ನಿಮಿಗೂ ಆಗಿರೊಕಲ್ಲಾ? ನನ್ನ ಹಲ್ಲ್ ತೆಗಿಯಕನ ನಾನ್ ಎಷ್ಟ್ ಬೊಬ್ಬೆ ಹಾಕೊಳಿ. ಅದ್ ಅಷ್ಟ್ ಇಷ್ಟ್ ಅಲ್ಲ. ಆಗ ನಂಗೆ ಬ್ಯಾನೆ ಬ್ಯಾರೆ. ಪೊಪ್ಪ ಹೇಳ್ದೊ, ಗೂಡೆಗಳ ಹಲ್ಲ್ ಲಾಯಿಕ ಇರೋಕುಂತ ಹೇಳ್ಕನ "ಪೊಪ್ಪ ಪೊಪ್ಪ ಪೊಪ್ಪ"! ಹಾಂಗೆ ಇಲ್ಲಿ ಅವ್ವ ಕೊಂಬಟೆ ಮೂದೇವಿ ಆಗಲಿ. ನಾನಾಗಿದ್ದಿದ್ದರೆ ಆ ಹಲ್ಲ್‌ನ ಕಿತ್ತ್ ತೋಡ್‌ಗೆ ಬಿಸಾಕಿಬುಡ್ತಿದ್ದೆ. ನಂಗೆ ಮಾತ್ರ ಹಲ್ಲ್ ತೆಗ್ಯಕನ ನೂಲು ಬ್ಯಾಡ ಪೊಪ್ಪ. ನನ್ನ ಹಲ್ಲ್‌ನ ಬರೀ ಕೈಲೇ ಕಿತ್ತ್ ತೋಟಕ್ಕೆ ಬಿಸಾಕಿನೆ ತೇಳ್ದಂವ "ಇಂವ ನನ್ನ ತಮ್ಮ".

○ ಬಾರಿಯಂಡ ಜೆ. ದಿವ್ಯ, ಮಡೆ.

ತುಂಬೆ ಗಿಡ ಮನೆ ಮದ್ದ್‌ತ ನಿಮ್ಗೆ ಗೊತ್ತುಟ?

1 ಮೂಲವ್ಯಾಧಿ ಕಾಯ್ಲೆ ಇರವು ತುಂಬೆ ರಸನ ಅರ್ಧ ಗಂಟೆ ಹಾಕಿಕಂಡ್ ಮತ್ತೆ ಮಿಯೋಕು.

2 ಮಾಮೂಲ್ ಜ್ವರ, ನೆಗ್‌ಡಿ, ಇರೋವು 2 ಚಮಚ ತುಂಬೆ ರಸದೊಟ್ಟಿಗೆ ನಾಲಕೈದ್ ಒಳ್ಳೆ ಮೆಣ್ಸ್‌ನ ಸೇರ್ಸಿ ಅರ್ದ್ದ್ ಕುಡ್ದರೆ ಜ್ವರ ಮತ್ತೆ ನೆಗ್‌ಡಿ ಹೋದತೇಳ್ವೆ.

3 ಒತ್ತಲೆ ಬ್ಯಾನೆ ಇರೊವು ತುಂಬೆ ರಸದೊಟ್ಟಿಗೆ ಈರುಳ್ಳಿನ ಸೇರ್ಸಿ ಅರಿಯೊಕು. ಮತ್ತೆ ಬ್ಯಾನೆ ಇರ್ಪ ಜಾಗಕ್ಕೆ ಮೆತ್ತಿ ಸ್ವಲ್ಪ ಹೊತ್ತ್ ಮಲ್ಕಂಡಿದ್ದರೆ ತಲೆಬ್ಯಾನೆ ಹೋದೆಗಡ.

4 ಸಕ್ಕರೆ ಕಾಯ್ಲೆ ಇರೋವು ತುಂಬೆ ದಂಟ್‌ನೊಟ್ಟಿಗೆ 3-4 ಒಳ್ಳೆಮೆಣ್ಸ್‌ನ ಸೇರ್ಸಿಕಂಡ್ 24 ಶಿಂಗ ತಿಂದರೆ ಗುಣ ಕಂಡದೆಗಡ

5 ಮನುಸ್ಸ ಬ್ಯಾನೆ ಇರೋವು ಹೂ ಬಿಟ್ಟ ತುಂಬೆ ಗಿಡದ ದಂಟ್‌ನ ಲಾಯ್ಕಾಗಿ ಅರ್ದ್ದ್, ಸೊಲ್ಪ ಸುಣ್ಣ, ಹಳೇ ಬೆಲ್ಲ ಹಾಕಿ ಉಗುರು ಬೆಚ್ಚಂಗೆ ಕಾಯ್ಸಿ ಆ ಜಾಗಕ್ಕೆ ಹಾಕಂಡ್ ಬಂದರೆ ಗುಣ ಕಂಡದೆತೇಳ್ವೆ.

6 ಕಜ್ಜಿ, ಕುರ, ಮೈಕೈ ತೊರ್ರುಸದು, ಅಲರ್ಜಿ ಇದ್ದೆಲ್ಲ ತುಂಬೆ ರಸನ ತೆಗ್ದ್ ಆ ಜಾಗಕ್ಕೆಲ್ಲ ಹಾಕಂಡ್ ಬಂದರೆ ಒಳ್ಳೆದ್‌ತೇಳ್ವೆ.

7 ತುಂಬೆ ಗಿಡದ ದಂಟ್‌ಂದ ರಸ ತೆಗ್ದ್, ಅದ್ಕೆ ಅರ್ಧದಷ್ಟ್ ಜೇನ್ ಸೇರ್ಸಿ ದಿನಕ್ಕೆ ಎರ್ಡ್ ಸರ್ತಿ, ಒಂದ್ ಶಿಂಗಗಂಟ ಕುಡ್ದರೆ ಮಂಜಕಾಮಲೆ ರೋಗ ಬಾದುಲೆಗಡ.

● ಲಾವಣಿ ತಿಮ್ಮಯ್ಯ, ಅಮಂದೂರು

ಸೂಚನೆ

ಸಂಗಾತಿ ಪ್ರಿಯರೆ,

ಕೊಡಗು ಸಂಗಾತಿಗೆ ಲೇಖನ, ಕಥೆ, ಕವನ ಇತ್ಯಾದಿ ಯಾವುದೇ ತರಹದ ಬರಹಗಳನ್ನು ಬರೆ ಹಗಳನ್ನು ಬರೆಯುವವರು ಖಡ್ಡಾಯವಾಗಿ ಪತ್ರಿಕೆಗೆ ಸದಸ್ಯರಾಗಿರಬೇಕು.

– ಸಂಪಾದಕ

ಕಾಡ್ ಮಾಸ ತಿಂಬ ಆಸೆಗೋಗಿ ನಾಯಿ ಕಳ್ಕಂಡ ನಿರಾಸೆ

ನಮ್ಮ ಪುಟ್ಟಪ್ಪಣ್ಣ ಬಾರೀ ಬ್ಯಾಟೆಗಾರ. ತುಂಬಾ ದಿನಂದ ಕಾಡ್ ಮಾಸ ತಿನ್ನಕೂತ ಆಸೆ. ಒಳ್ಳ ಬೆಳೆ ಬಂದ ಸಮಯ. ಪುಟ್ಟಪ್ಪಣ್ಣ ಗದ್ದೆಕಡೆ ನೋಡಿಕಂಡ್ ಜಗ್ಲಿಲಿ ತಲೆಗೆ ಕೈಹೊತ್ತ್ ಕುದ್ದಿತ್ತ್. 'ಪುಟ್ಟಪ್ಪಣ್ಣಾಂತ' ಕರ್ದಂಗೆ ಕೇಳ್ತ್. ಅಷ್ಟೊತ್ತಿಗೆ ದಾಸ್ ನಾಯಿ 'ಬೌ ಬೌ'ತೇಳ್ತ್. ಪುಟ್ಟಪ್ಪಣ್ಣ ಜಗ್ಲಿಂದ ಎದ್ದ್ ದಾರಿ ಕಡೆ ನೋಡ್ತ್. 'ಓ ಕುಞ್ಞಣ್ಣ ಬಾ, ನಾಯಿ ಕಚ್ಚುದುಲೆ, ಹಿಡ್ಕಣೆ ಬಾ" ತ ಕರ್ತ್. ಪುಟ್ಟಪ್ಪಣ್ಣ ಕೇಳ್ತ್, ಏನ್ ಮತ್ತೆ, ಮನೆ ಕಡೆ ಉಸಾರೊಳೊನ? ಗದ್ದೆ ಬೆಳೆ ಹೆಂಗುಟ್ಟ್ ಅಯ್ಯೋ! ಪುಟ್ಟಪ್ಪಣ್ಣ ಎಂತ ಹೇಳ್ದ್. ಇದ್ದ ನಾಕ್ ಕಾಳ್ ಬತ್ತನ ಹಂದಿಗ ಬಂದ್ ತಿಂಬಕೆ ಸುರ್ ಮಾಡಿಯೊಳೊ. ಎಂತ ಮಾಡ್ದ್ ಹೇಳ್.

ಕುಞ್ಞಣ್ಣ, ಅದಿಕ್ಯಾಕೆ ತಲೆ ಬಿಸಿ ಮಾಡ್ಕಂಡಿಯ, ಮನೆಂದ ಕರೆಂಟ್ ವೈರ್ ಎಳ್ದ್ ಗದ್ದೆಲಿ ಬೆಳ್ಕ್ ಇಡ್. ಮತ್ತೆ ನೋಡೊನೊ. ಎಲೆಡ್ಕೆ ಬೇಕಾ, ಇಂದಾ ಹೊಸೆಪ್ಪು ಉಟ್ಟ್ ತಿಂದ್‌ಕ. ನಾ ಹೇಳ್ದಂಗೆ ಮಾಡ್ಬಲಾ.

ಕುಞ್ಞಣ್ಣ ಹೋಗಿ ಮನೆಂದ ಕರೆಂಟ್ ವೈರ್ ಎಳ್ದ್ ಗದ್ದೆಲಿ ಬೆಳ್ಕ್ ಇಟ್ಟತ್. ಎರ್ಡ್ ದಿನ ಹಂದಿ ಬಾತ್ಲೆ. ಕುಞ್ಞಣ್ಣಂಗೆ ಹಂದಿ ಇನ್ನ್ ಬಾಕಿಲೆತ ಖುಸಿ ಆತ್. ಮೂರ್ನೆ ದಿನ ಹಂದಿ ಗದ್ದೆಗೆ ಬಂದ್ ಹೊಟ್ಟೆ ತುಂಬ್ಸಿ ಹೋವುಟು. ಎಲಾ! ಇವರ ಧೈರವೇ. ಬೆಳ್ಕ್ ಇದ್ದಂಗೆ ಬಂದ್ ತಿಂದ್ ಹೋವುಟಲ್ಲಾತ ಕುಞ್ಞಣ್ಣಂಗೆ ತಲೆ ಬಿಸಿ ಆಗಿ ಪುಟ್ಟಪ್ಪಣ್ಣನತ್ರ ಹೋತ್. ಅಣ್ಣಾ, ಇಂದ್ ಬೆಳ್ಕ್ ಇದ್ದಂಗೆ ಹಂದಿ ಗದ್ದೆ ತಿಂದ್ ಹೋವುಟು. ಎಂತ ಮಾಡ್ದ್. ನಾ ಹೇಳ್ನೆ ಇಂದ್ ಅದ್ಕೆ ಜನ ಸೇರ್ಸಿ ಕೂಡು ಬ್ಯಾಟೆ ಮಾಡೊನೊ. ಅದರ ಹೊಟ್ಟೆಲಿ ಇದ್ದ ಬತ್ತನ ತೆಗ್ದ್ ಅವರ ಮಾಸನ ನಮ್ಮ ಹೊಟ್ಟೆಗೆ ಸೇರ್ಸೊನೊ. ನೀನ್ ಹೋಗಿ ನಾಕ್ ಜನನ ಬ್ಯಾಟೆಗೆ ಸೇರ್ಸ್.

ಕುಞ್ಞಣ್ಣ ಹೋಗಿ ರಾಮು, ಚೋಮಂಗೆಲ್ಲ ಹೇಳ್ತ್. ಎಲ್ಲಾ ಜನ ಒಂದ್ ಕಡೆ ಸೇರಿ ಆಕನ ಜನ ಎಷ್ಟ್ ಗೊತ್ತಾ, ಕೆಲವು ಕುಟ್ಟೆ, ಕುರ್ಲೆತೇಳಿ 30, 40 ಜನ ಸೇರ್ದೊ.

ಕುಞ್ಞಣ್ಣನ ಗದ್ದೆ ಹತ್ರ ಆಚೆ ಗುಡ್ಡೆಗೆ ಮೊದ್ಲ ಬ್ಯಾಟೆ ಕೂಡ್ದತ ಆತ್. ಬಿಲ್ಲ್ ನಿಲ್ಲೋವು ಬಿಲ್ಲ್ ನಿತ್ತೊ, ನಾಯಿ ಕೂಡೊವು ನಾಯಿ ಕರ್ಕಂಡ್ ಗುಡ್ಡೆ ಇನ್ನೊಂದು ಕಡೆಂದ 'ಚುವ್ವೋ, ಚುವ್ವೋ' ತೇಳಿ ಬೊಬ್ಬೆ ಹಾಕಂಡ್ ಕಾಡೊಳಗೆ ನುಗ್ಗಿದೊ.

ದಾಸು ನಾಯಿ ಬ್ಯಾಟೆಲಿ ಬಾರಿ ಹುಸಾರ್. 'ಮನೆಗೆ ಬಂದರೆ ಇಲಿ, ಕಾಡಿಗೆ ಹೋದರೆ ಹುಲಿ'ತೇಳುವಂಗೆ. ಕಾಡ್ ನುಗ್ಗಿ ಹೆಂಗೆಲ್ಲೋ ಮಾಡಿ ದಾಸ್ ಹಂದಿನ ಹುಡ್ಕಿ ಹಿಡ್ತ್. ನಾಯಿ ಬೌ ಬೌ ತ ಬೊಗ್ಲೊಟುಟ್ಟು. ಸೊಲ್ಪ ಹೊತ್ತಿಗೆ ನಾಯಿಗ ಕಾಂಯಿ ಕಾಂಯಿ ತ ಮರ್ಟತ್. ಬಿಲ್ಲ್ ನಿತ್ತ ಪುಟ್ಟಪ್ಪಣ್ಣ ಓಡಿ ಬಂದ್ ನೋಡ್ಕನ ಹಂದಿ ಒಂದ್ ನಾಯಿನ ಕೈ ಜಬ್ಬಿ, ದಾಸು ನಾಯಿನ ಕೈಪಾರ್ ಜಬ್ಬಿಬುಟ್ಟುಟು. ಪುಟ್ಟಪ್ಪಣ್ಣ ಹಂದಿನ ನೋಡಿ ಓಡಿ ಹೋಗಿ ಒಂದು ಅಡ್ಡ ಬಿದ್ದ ಮರಕ್ಕೆ ಹತ್ತಿ ಹಂದಿಗೆ ಗುಂಡ್ ಹೊಡ್ತ್. ಈ ಗುಂಡು ಹಂದಿಗೆ ಮುಟ್ಟತ್ತೊ ಇಲ್ಲ್ಯೊ, ಹಂದಿ ಓಡಿಕೆ ಸುರು ಮಾಡ್ತ್. ಹಂದಿ ಕುಞ್ಞಣ್ಣನ ಹಕ್ಕಲಾಗಿ ಓಡಿ ಬಾತ್. ಕುಞ್ಞಣ್ಣ ಹಂದಿನ ನೋಡಿ ಮರ ಹತ್ಕನ ಕಾಲ್ ಜಾರಿ ಬಿದ್ದರೆ ಹಂದಿ ಹಕ್ಕಲೆ. ಹಂದಿ ಗುಗ್ ತೇಳಿ ಪುನಃ ಗದ್ದೆ ಬಿದ್ದ್ ಓಡಿಕೆ ಸುರ್‌ಮಾಡ್ತ್. ಕುಞ್ಞಣ್ಣ ಎದ್ದ್ ಹಂದಿಗೆ ಹಿಂದೆಂದ ಗುಂಡ್‌ಹೊಡ್ತ್. ಅಷ್ಟೊತ್ತಿಗೆ ಬಿಲ್ಲ್ ನಿತ್ತವು ಎಲ್ಲಾ ಓಡಿ ಬಂದ್ ಗುಂಡು ಹೊಡ್ದೊ. ಒಟ್ಟಾರೆ ಹಂದಿಗೆ ಗುಂಡೆಷ್ಟ್ ಗೊತ್ತಾ, 5, 6. ಹಂದಿ ಮಾತ್ರ ಬೀತ್ಲೆ. ಹಂದಿ ಗದ್ದೆ ದಾಟಿ ಆಚೆಕರೆಲಿ ಹೋಕನ ಪುಟ್ಟಪ್ಪಣ್ಣ ಹಿಂದೆಂದ ಒಂದ್ ಗುಂಡ್ ಹೊಡ್ತ್. ಹಂದಿ ಗದ್ದೆ ಆಚೆಕರೆ ಹತ್ತಿ ಹೋತ್. ಹಂದಿ ಎಲ್ಲಿ ಹುಡ್ಕಿರೂ ಇಲ್ಲೆ. ಜನ ಎಲ್ಲ ಸೇರ್ದಕ್ಕೆ ಹಂದಿಗೆ ಗುಂಡ್ ಹೊಡ್ದ್ ಆತ್, ಹಂದಿ ಜಬ್ಬಿದ ದಾಸು ಸಾಯಿನ ಕಳ್ಕಂಡ್ ಆತ್. ಗಂಟೆ ನೋಡ್ರೆ ಸಾಯಂಕಾಲ 6 ಆವುಟು. ಬಂದ ದಾರಿಗೆ ಸುಂಕ ಇಲ್ಲೆಂತೇಳಿ, ಹಂದಿನ ಆಚೆಗೆ ಬೆರ್ಸಿ, ಕೈ ಕಳ್ಕಂಡ ನಾಯಿನ ಹೊತ್ಕಂಡ್ ಮನೆಗೆ ಬಂದೊ. "ಇದ್ರಂದ ನಾವು ತಿಳಿಯೊಕು, ಕೂಡು ಬ್ಯಾಡೆಗೆ ಹೋಕಾಗ್ದ್, ಇಂದ್ ನಾಯಿಗೆ ಬಂದದ್, ನಾಳೆ ಮನುಷ್ಯಂಗೆ ಬಾದುಂತೇಳ್ವಂತ ಸಮಯ ಇದ್ದದ್„

● ಹುಲಿಮನೆ ರಾಮಣ್ಣ ಲೋಕೇಶ್
ಮಡೆ

ಕೃಷಿ ಪದವೀಧರರ ಗಮನಕ್ಕೆ

ಕೃಷಿ ಪದವೀಧರರು ತಂತ್ರಜ್ಞರೆಂದು ಪರಿಗಣಿಸಿ ಕೇಂದ್ರಿಯ ಕೃಷಿ ಆಯುಕ್ತರು ತಮ್ಮ ಆದೇಶ ಸಂಖ್ಯೆ 1989–92 ರಂತೆ ಇನ್ನು ಮುಂದೆ ಕೃಷಿ ಪದವೀಧರರು ತಮ್ಮ ಹೆಸರಿನ ಮುಂದೆ ಡಾಕ್ಟರ್ ಎಂದು ಅಲಂಕರಿಸಬಹುದು ಹಾಗೂ ಹಸಿರು ಕ್ರಾಸ್ + ಚಿಹ್ನೆಯನ್ನು ಬಳಸಬಹುದಾಗಿದೆ. ಇದರಿಂದ ಕೃಷಿ ಪದವೀಧರರ ಬಹುದಿನದ ಈ ಬೇಡಿಕೆ ಈಡೇರಿದಂತಾಗಿದೆ.

(ಆಧಾರ : ಫ್ಲೋಬಾಯ್ಸ್) ಸಂ. : 12 ಮತ್ತು 13 ಸಂಚಿಕೆ 4 ಮತ್ತು 1.

ಚುಟುಕು

ಬಿಂಕದ ಸಿಂಗಾರಿ
ಮನ ಡೊಂಕಿನ ವೈಯ್ಯಾರಿ
ಪಾರ್ಕಿನಲ್ಲಿ ನಾನು ನೀನು ಸೇರಿ ಮುಗಿಸೋಣ ಹತ್ತು ಲೀಟರ್ ಕಡ್ಲೆ ಪುರಿ

○ ಕೊಲ್ಯದಮನೆ ಮನೋಜ್, ಬೆಂ.

"ಕೊಡಗು ಸಂಗಾತಿ" ಪತ್ರಿಕೆಯ ಮುಖ್ಯ ಕಛೇರಿಗೆ ನಾಗರಾಜನ ಭೇಟಿ

ದಿನಾಂಕ 6–6–98ರ ಮಧ್ಯಾಹ್ನ ಸುಮಾರು 12 ಗಂಟೆ ಹೊತ್ತಿಗೆ ಹಿರಿ ಮುತ್ಸದ್ಧಿ ಗೋಧಿ ನಾಗರನು ಪತ್ರಿಕೆಯ ಕಛೇರಿ ಒಳಗೆ ಭೇಟಿ ಕೊಟ್ಟು, ಪಕ್ಕದಲ್ಲಿಟ್ಟಿದ್ದ ಸಾಮಾನುಗಳ ಮಧ್ಯೆ ಆರಾಮವಾಗಿ ಮಲಗಿ ನಿದ್ರಿಸಿದ ಘಟನೆಯೊಂದು ಜರುಗಿತು.

ಸಂಜೆ 3–30ಕ್ಕೆ ಮನೆಗೆ ಹಿಂದಿರುಗಿದ ಸಂಗಾತಿಯ ಗೌರವ ಸಂಪಾದಕರಿಂದ ಎಚ್ಚರಗೊಂಡ ಈ ನಾಗರಾಜನಿಗೆ ತನಿಯೆರೆದು ಪೂಜೆ ಸಲ್ಲಿಸಲಾಯಿತು. ಆದರೂ ಸಿಂಬಿನಂತೆ ತೆಕ್ಕೆ ಹಾಕಿ ಮಲಗಿದ್ದ ನಾಗರಾಜನನ್ನು ಏನು ಮಾಡುವುದೆಂದು ತೋಚದೆ ಇದ್ದಾಗ, ಹಾವು ಹಿಡಿಯುವುದರಲ್ಲಿ ಪರಿಣಿತನಾದ ಸ್ನೇಕ್ ಶಾಮ್‌ಗೆ ಪೇಜರ್ ಮೂಲಕ ವಿಷಯ ತಿಳಿಸಲಾಗಿ, ಆತನ ಆಗಮನದಿಂದ ಸಮಸ್ಯೆ ಬಗೆಹರಿಯಿತು.

ನಾಗರನು ಸುಮಾರು 5 ರಿಂದ 6 ಅಡಿಗಳಷ್ಟು ಉದ್ದವಿದ್ದನಲ್ಲದೆ, ಪೂರ್ತಿ ಬೆಳೆದು ವಯಸ್ಸಾದ ಈ ಹಿರಿಯ ಗೋಧಿ ನಾಗರನ ಹೆಡೆ ಮುಕ್ಕಾಲು ಅಡಿ ಅಗಲವಿತ್ತಲ್ಲದೆ ನೋಡಲು ಸುಂದರವಾಗಿತ್ತು. ಶ್ಯಾಮ್ ಅದರ ವಿಷದ ಹಲ್ಲನ್ನು ಕಿತ್ತು ತನ್ನ ಬ್ಯಾಗಿನಲ್ಲಿರಿಸಿಕೊಂಡ. ನಿಮ್ಮಲ್ಲಿ ಏನಾದರೂ ನಾಗರನು ಕಾಣಿಸಿಕೊಂಡರೆ ಈ ನಂಬರಿಗೆ ಪೇಜರ್ ಅಥವಾ ದೂರವಾಣಿ ಮಾಡುವುದರ ಮೂಲಕ ಸಂಪರ್ಕಿಸಿ.

ಪೇಜರ್ ನಂ. 9628–904008 ದೂರವಾಣಿ : 517399

ಶ್ರದ್ಧಾಂಜಲಿ

"ಕೊಡಗು ಸಂಗಾತಿ"ಯ ಸದಸ್ಯರಾದ ಶ್ರೀಯುತ ಬೈಲೋಳಿರ ಪ್ರಭಾಕರರವರು ದಿನಾಂಕ 21–5–98 ರಂದು ಅಕಾಲಿಕವಾಗಿ ಕಾಲವಶರಾದರು. ಇವರು ಮಂಡಲ ಸದಸ್ಯರಾಗಿದ್ದು, ಇನ್ನಿತರ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಶ್ರೀಯುತರು ಪತ್ನಿ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಅವರಿಗೆ "ಕೊಡಗು ಸಂಗಾತಿ"ಯ ಪರವಾಗಿ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

○ ತೆಕ್ಕಡ ಬಿ. ಕುಮಾರ, ಮುತ್ತಾರ್ಮುಡಿ.

ಶ್ರದ್ಧಾಂಜಲಿ

ದಿನಾಂಕ 13–6–98ನೇ ಶನಿವಾರ ಮೊಟ್ಟನ ದಿವಂಗತ ಕ್ಯಾಪ್ಟನ್ ಕಾರ್ಯಪ್ಪನವರ ಧರ್ಮಪತ್ನಿ **ಶ್ರೀಮತಿ ತಾಯಮ್ಮನವರು** ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಧೀರ್ಘ ಕಾಲದಿಂದ ಅಸ್ವಸ್ಥರಾಗಿದ್ದರು. ಇವರಿಗೆ 75 ವರ್ಷ ವಯಸ್ಸಾಗಿತ್ತು. ಇವರು ಮೂವರು ಪುತ್ರರು ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಇವರ ಅಗಲಿಕೆಗೆ "ಕೊಡಗು ಸಂಗಾತಿ" ಶ್ರದ್ಧಾಂಜಲಿ ಅರ್ಪಿಸುತ್ತದೆ.

K·R.N.N. 240

2ನೇ ವರ್ಷಕ್ಕೆ ಕಾಲಿಟ್ಟಿರುವ "ಕೊಡಗು ಸಂಗಾತಿ"ಗೆ

ನಮ್ಮ ಶುಭಾಶಯಗಳು



ಯಿಂದ :

ಶ್ರೀ ಬಿಟ್ಟೀರ ಅಚ್ಚಯ್ಯ ರಾಮಯ್ಯ

ಮಡಿಕೇರಿ ಪುರಸಭಾ ಸದಸ್ಯರು

ಮಡಿಕೇರಿ ಟೌನ್ ಬ್ಯಾಂಕ್‌ನ ಉಪಾಧ್ಯಕ್ಷರು

ಕಾವೇರಿ ಭಕ್ತ ಮಂಡಳಿಯ ಅಧ್ಯಕ್ಷರು

ಶ್ರೀಮತಿ ಬಿಟ್ಟೀರ ಪದ್ಮಾವತಿ ರಾಮಯ್ಯ

ಮಗಳು : ವೈನಿ ರಾಮಯ್ಯ



ರೇಸ್ ಕೋರ್ಸ್ ರಸ್ತೆ, ನ್ಯೂ ಎಕ್ಸ್‌ಟೆನ್ಸನ್, ಮಡಿಕೇರಿ

ದೂರವಾಣಿ : (08272) 28762

Printed by M K Thammaiah and Published by Kodagu Sangathi on behalf of Pattada P. Sheelamani and Printed at ASHIRWAD PRINTERS, 180/A, 6th Main, Vinayakanagar, Mysore-21 Published at Mysore, Editor PATTADA P. SHEELAMANI, No. 35, 1st Cross, 4th Block (Near Divisional Telephone Office) Jayalakshmipuram, Mysore-570 012 Phone : 516771